ಅಜಕಲ್ಪ ಕೋರಿ ವರ್ಷದವರೆಲ್ಲರೂ ಹಿರಿಯರೆ?

ಹುತ್ತೇರಿ ಬೆತ್ತ ಬೆಳೆದ ತಪಸ್ವಿಗಳೆಲ್ಲರೂ ಹಿರಿಯರೆ?

ನಡು ಮುರಿದು ಗುಡುಗೂರಿ ತಲೆ ನಡುಗಿ ದವರೆಲ್ಲ ಹಿರಿಯರೆ?

ನರೆತರೆ ಹೆಚ್ಚಿ ಮತಿಗೆಟ್ಟು ಒಂದನಾಡಹೋಗಿ

ಒಂಬತ್ತನಾಡುವ ಅಜ್ಞಾನಿಗಳೆಲ್ಲ ಹಿರಿಯರೆ?

ಅನುವನರಿದು ಘವನ ಬೆರೆಸಿ ಚೆನ್ನಸಂಗಯ್ಯನಲ್ಲಿ

ಬೆರೆಸಿ ಬೇರಿಲ್ಲದಿಪ್ಪ ಹಿರಿಯತನ

ನಮ್ಮ ಮಹಾದೇವಿಯಕ್ಕಂಗಾಯಿತ್ತು ಕೇಳಾ ಪ್ರಭುವೇ!

ಕಂಗಳ ನೋಟ ಕರಸ್ಥಲದಲ್ಲಿ

ಪ್ರಾಣದ ಕೂಟ ಅಂತರಂಗದ ಅರಿವಿನಲ್ಲಿ

ಅಂಗವಿಕಾರ ನಿರ್ವಿಕಾರವಾಯಿತ್ತು

ಕರಣದ ಸಂಗಸುಖ ನಿಸ್ಸಂಗವಾಯಿತ್ತು

ಹೆಂಗೂಸೆಂಬ ಭಾವ ಬಯಲು ಬೆರೆಸಿತ್ತು

ಕಲಿದೇವರ ದೇವ ನಿಮ್ಮ ಒಲಿಸಿ ಒಚ್ಚತವಾದ

ಮಹಾದೇವಿಯಕ್ಕನ ಪಾದವ ನೆನದು

ನಾನು ಬದುಕಿದೆನು.

ನುದಿಗೆಡೆಗೊಡೆದ ಘನವ ಹಿಡಿದು ಒಡಬಂದಿಯಾದಳು

ಎಡೆ ಇಲ್ಲದ ಪರಿಪೂರ್ಣದೊಳಗೆ ನಡೆಗುಡಿಗೆಟ್ಟಳು

ತನ್ನ ನಿಲುಕಡೆಯ ನಿಗವ ತಾನರಿಯದಂತೆ

ಎನ್ನಿಂದ ಕೇಲಿ ಸ್ವಯವಾದಳು

ಗೊಗೇಶ್ವರ ಸಾಕ್ಷಿಯಾಗಿ ಮಹಾವದೇವಿಯಕ್ಕನ

ನಿಲವ ಕೊಂಡಾಡುವುದಕ್ಕೆ

ತೆರಹಿಲ್ಲ ಕಾಣಾ ಮಡಿವಾಳಯ್ಯ.

# ಅಕ್ಕನ ವಚನಗಳು

೧. ಆಘಟಿತ–ಘಟಿತನ ಒಲವಿನ ಶಿಶು

ಕಟ್ಟಿದನು ಜಗಕ್ಕೆ ಬಿರುತನು!

ಕಾಮ–ಕ್ರೋಧ–ಲೋಭ–ಮೋಹ–ಮದ–ಮತ್ಸರಗಳಿಗೆ

ಇಕ್ಕಿದೆನು ಕಾಲಲ್ಲಿ ತೊಡರನು!

ಗುಗುಕೃಪೆಯೆಂಬ ತಿಗುರನಿಕ್ಕಿ

ಮಹಾಶರಣೆಂಬ ಅಲಗ ಕೊಂಡು

ನಿನ್ನ ಕೊಲುವೆ ಗೆಲುವೆ ನಾನು!

ಬ್ರಹ್ಮಪಾಶವೆಂಬ ಕಳನನೆ ಸವರಿ

ವಿಷ್ಣುಮಾಯೆಯೆಂಬ ಎಡಗೋಲ ಕೂಕಿ

ಎನ್ನೊಡೆಯ ಚೆನ್ನಮಲ್ಲಿಕಾರ್ಜುನಯ್ಯ ತಲೆದೊಗಲಿಕಾಡುವೆ ನಾನು

೨. ನೆಲದ ಮರೆಯ ನಿಧಾನದಂತೆ

ಫಲದ ಮರೆಯ ರುಚಿಯಂತೆ

ಶಿಲೆಯ ಮರೆಯ ಹೇಮದಂತೆ

ತಿಲದ ಮರೆಯ ತೈಲದಂತೆ

ಮರದ ಮರೆಯ ತೇಜದಂತೆ

ಭಾವ ಪದ ಮರೆಯ ಬ್ರಹ್ಮವಾಗಿ

ಚೆನ್ನ ಮಲ್ಲಿಕಾರ್ಜುನನ ನಿಲವನಾರೂ ಅರಿಯ ಬಾರದು!

೩. ಈಳೆ– ನಿಂಬೆ – ಮಾವು– ಮಾದಲಕ್ಕೆ

ಹುಳಿನೀರನೆರೆದವರಾರಯ್ಯ?!

ಕಬ್ಬು–ಬಾಳೆ–ನಾರಿವಾಳಕ್ಕೆ ಸಿಹಿನೀರನೆರೆದವರಾರಯ್ಯ?!

ಕಳವೆ ಶಾಲಿಗೆ ಒಗರದ ಉದಕವನೆರೆವವರಾರಯ್ಯ?!

ಮುರುಗ –ಮಲ್ಲಿಗೆ –ಪಚ್ಚೆ–ಮುಡಿವಾಳಕ್ಕೆ

ಪರಿಮಳದುದಕವನೆರೆದವರಾರಯ್ಯ?!

ಇಂತೀ ಜಲ ಒಂದೆ, ನೆಲ ಒಂದೆ, ಆಕಾಶ ಒಂದೆ!

ಒಂದೇ ಜಲವು ಹಲವು ದ್ರವ್ಯಂಗಳ ಕೊಡಿ

ತನ್ನ ಪರಿ ಬೇರಾಗಿಹ ಹಾಂಗೆ

ಎನ್ನ ದೇವ ಚೆನ್ನ ಮಲ್ಲಿಕಾರ್ಜುನಯ್ಯನು

ಹಲವು ಜಗಂಗಳ ಕೂಡಿಕೊಂಡಿದ್ದರೇನು? ತನ್ನ ಪರಿ ಬೇರೆ!

೪. ತನ್ನ ವಿನೋದಕ್ಕೆ ತಾನೇ ಸೃಜಿಸಿದ ಜಗತ್ತ!

ತನ್ನ ವಿನೋದಕ್ಕೆ ತಾನೇ ಸುತ್ತಿದನದಕ್ಕೆ ಸಕಲ ಪ್ರಪಂಚ!!

ತನ್ನ ವಿನೋದಕ್ಕೆ ತಾನೇ ತಿರುಗಿಸಿದನಂತ ಭವದುಃಖಂಗಳಲ್ಲಿ!

ಇಂತೆನ್ನ ಚೆನ್ನ ಮಲ್ಲಿಕಾರ್ಜುನದೇವನೆಂಬ ಪರಶಿವನು

ತನ್ನ ಜಗದ್ವಿಲಾಸಸಾಕಾದ ಮತ್ತೆ

ತಾನೇ ಪರಿವನಾ ಮಾಯಪಾಶವನು!

೫. ಶಿವಂಗೆ ತಪ್ಪಿದ ಕಾಲ ಭಸ್ಮವಾದುದನರಿಯಾ?

ಶಿವಂಗೆ ತಪ್ಪಿದ ಕಾಮನುರಿದುದನರಿಯಾ?

ಶಿವಂಗೆ ತಪ್ಪಿದ ಬ್ರಹ್ಮನ ಶಿರ ಹೋದುದನರಿಯಾ?

ಚೆನ್ನ ಮಲ್ಲಿಕಾರ್ಜುನನ ಪಾದಕ್ಕೆ ತಪ್ಪಿದಡೆ

ಭವಘೋರನರಕವೆಂದರಿಯಾ ಮರುಳೇ

೬. ಕಾಮ ಬಲ್ಲಿದನೆಂದರೆ

ಉರುಹಿ ಭಸ್ಮವ ಮಾರಿದ!

ಕಾಲ ಬಲ್ಲಿದನೆಂದರೆ ಕೆಡಹಿ ತುಳಿದ

ಬ್ರಹ್ಮ ಬಲ್ಲಿದನೆಂದರೆ

ಶಿರವ ಚಿವುಟಿಯಾಡಿದ!

ಎಲೆ ಅವ್ವ, ನೀನು ಕೇಳಾ ತಾಯೆ,

ವಿಷ್ಣು ವಲ್ಲಿದನೆಂದರೆ

ಮುರಿದು ಕಂಕಾಳವ ಪಿಡಿದ!

ತ್ರಿಪುರದ ಕೋಪ ಬಲ್ಲಿತ್ತೆಂದರೆ

ನೊಸಲ ಕಣ್ಣಿನಿಂದುರುಹಿದನವ್ವ!

ಇದು ಕಾರಣ

ಚೆನ್ನ ಮಲ್ಲಿಕಾರ್ಜುನ ಗಂಡನೆನಗೆ!

[ಜನನಮರಣಕ್ಕೊಳಗಾಗದವನ]

ಬಲುಹನೇನ ಬಣ್ಣಿಪೆನವ್ವ!?

೭. ಅಯ್ಯ, ಪಾತಾಳವಿತ್ತಿತ್ತ, ಶ್ರೀ ಪಾದವತ್ತತ್ತ,

ಬ್ರಹ್ಮಾಂಡವಿತ್ತಿತ್ತ, ಮಣಿಮಕುಟವತ್ತತ್ತ!

ಅಯ್ಯ, ದಶ ದಿಕ್ಕು ಇತ್ತಿತ್ತ, ದಶ ಭುಜಗಳತ್ತತ್ತ!

ಚೆನ್ನಮಲ್ಲಿಕಾರ್ಜುನಯ್ಯ,

ನೀವೆನ್ನ ಕಸ್ಥಲಕ್ಕೆ ಬಂದು ಚುಳುಕಾದಿರಯ್ಯ!

೮. ದೇವ, ಎನ್ನ ಹೃದಯಕಮಲದೊಳಗೆ ಪ್ರಜ್ವಳಿಪ್ಪ ಬೆಳಗೆ

ದೇವ, ಎನ್ನ ಮನದ ಮೊನೆಯೊಳೊಪ್ಪುತಿರ್ಪ ಬೆಳಗಿನೊಳಗೆ

ಗುರುವೆ ಬಾರ, ಪರವೆ ಬಾರ, ವರವೆ ಬಾರ ದೇವದೇವ

ಹರನೆ ಬಾರ, ಸುಕೃತಸಾರ ಸರ್ಪಹಾರ ಬಾರ ದೇವ

ವೀರಭದ್ರ, ರುದ್ರ, ದುರಿತದೂರ, ವಿಶ್ವರೂಪ ಬಾರ

ಮಾರಮಥನ, ಪುಣ್ಯಕಥನ, ಸಹಜಮಿಥುನರೂಪ ಬಾರ

ತಾರಗಿರಿಯ ಪಿರಿಯ ಸಿರಿಯ ಸತ್ಯ ಶರಣ ಭರಣ ಬಾರ

ಬಾರ ಫಲವೆ, ಫಲದ ರಸವೆ, ರಸದ ಸವಿಯ ಸುಖವೆ ಬಾರ

ಬಾರ ಗುರುವೆ, ಬಾರ ಪರವೆ, ಬಾರ ವರವೆ ಮಲ್ಲಿನಾಥ

ಬಾರ ಧನವೆ, ಬಾರ ಸುಕೃತಸಾರ, ಬಾರ ಮಲ್ಲಿನಾಥ

ಬಾರ ಸಿದ್ದ, ಭವವಿರುದ್ಧ ಸುಪ್ರಸಿದ್ಧ ಮಲ್ಲಿನಾಥ

ಬಾರ ಮುಡುಹು ಮುಂದಲೆಗಳ ಕುರುಳನೀವೆ ಮಲ್ಲಿನಾಥ ಬಾರ.

೯. ತನು ಕರಗದವರಲ್ಲಿ ಮಜ್ಜನವನೊಲ್ಲೆಯಯ್ಯ ನೀನು!

ಮನ ಕರಗದವರಲ್ಲಿ ಪುಷ್ಪವನೊಲ್ಲೆಯಯ್ಯ ನೀನು!

ಹದುಳಿಗರಲ್ಲದವರಲ್ಲಿ ಗಂದಾಕ್ಷತೆಯನೊಲ್ಲೆಯಯ್ಯ ನೀನು!

ಅರಿವು ಕಣ್ದೆರಯದವರಲ್ಲಿ ಆರತಿಯನೊಲ್ಲೆಯಯ್ಯ ನೀನು!

ಭಾವಶುದ್ದ ವಿಲ್ಲದವರಲ್ಲಿ ಧೂಪವನೊಲ್ಲೆಯಯ್ಯ ನೀನು!

ಪರಿಣಾಮಿಗಳಲ್ಲದವರಲ್ಲಿ ನೈವೇದ್ಯವನೊಲ್ಲೆಯಯ್ಯ ನೀನು!

ತ್ರಿಕರಣಶುದ್ದವಿಲ್ಲದವರಲ್ಲಿ ತಾಂಬೂಲವನೊಲ್ಲೆಯಯ್ಯ ನೀನು!

ಹೃದಯಕಮಲ ಅರಳದವರಲ್ಲಿ ಇರಲೊಲೆಲ್ಲೆಯಯ್ಯ ನೀನು!

ಎನ್ನಲ್ಲಿ ಏನುಂಟೆಂದು ಕರಸ್ಥಲವನಿಂಬುಗೊಂಡೆ ಹೇಳಾ

ಚೆನ್ನ ಮಲ್ಲಿಕಾರ್ಜುನಯ್ಯ.

೧೦. ಅಷ್ಟವಿಧಾರ್ಚನೆಯ ಮಾಡಿ ಒಲಿಸುವೆನೆ ಅಯ್ಯ?

ನೀನು ಬಹಿರಂಗವ್ಯವಹಾರದೋರಸ್ಥನು!

ಅಂತರಂಗದಲ್ಲಿ ಧ್ಯಾನವ ಮಾಡಿ ಒಲಿಸುವೆನೆ ಅಯ್ಯ?

ನೀನು ವಾಙ್ಮನಕ್ಕತೀತನು

ಜಪಸ್ತೋತ್ರದಿಂದ ಒಲಿಸುವನೆ ಅಯ್ಯ?

ನೀನು ನಾದಾತೀತನು!

ಭಾವಜ್ಞಾನದಿಂದೊಲಿಸುವೆನೆ ಅಯ್ಯ?

ನೀನು ಮತಿಗತೀತನು!

ಹೃದಯಕಮಲಮಧ್ಯದಲ್ಲಿ ಇಂಬಿಟ್ಟುಕೊಂಬೆನೇ ಅಯ್ಯ?

ನೀನು ಸರ್ವಾಂಗಪರಿಪೂರ್ಣನು!

ಅಯ್ಯ ನಿನ್ನ ಒಲಿಸಲೆನ್ನಳವಲ್ಲ

ನೀ ಒಲಿವುದೆ ಸುಖವಯ್ಯ ಚೆನ್ನಮಲ್ಲಿಕಾರ್ಜುನಯ್ಯ!

೧೧. ನೀರಕ್ಷೀರದಂತೆ ನೀನಿಪ್ಪೆಯಾಗಿ

ಆವುದು ಮುಂದು, ಆವುದು ಹಿಂದು ಎಂದರಿಯೆನು.

ಆವುದು ಕರ್ತೃ, ಆವುದು ಕಿರಿದೆಂದರಿಯೆನು.

ಚೆನ್ನಮಲ್ಲಿಕಾರ್ಜುನಯ್ಯ, ನಿನ್ನ ನೊಲಿದು ಕೊಂಡಾರಿದರೆ

ಇರುಹೆ ರುದ್ರನಾಗದೆ ಹೇಳಯ್ಯ,

೧೨. ಎನ್ನ ಕಾಯ ಮಣ್ಣು, ಜೀವ ಬಯಲು!

ಆವುದ ಹಿಡಿವೆನಯ್ಯ ದೇವ?

ನಿಮ್ಮನಾವ ಪರಿಯಲ್ಲಿ ನಾ ನೆನೆವೆನಯ್ಯ?

ಎನ್ನ ಮಾಯವನು ಮಾಣಿಸಯ್ಯ ಚೆನ್ನಮಲ್ಲಿಕಾರ್ಜುನಯ್ಯ!

೧೩.ಆವಾಗಳೂ ಎನ್ನ ಮನ ಉದರಕ್ಕೆ ಹರಿವುದು!
ಕಾಣಲಾರೆನಯ್ಯ ನಿಮ್ಮುವನು!
ಭೇದಿಸಲಾರೆನಯ್ಯ ನಿಮ್ಮ ಮಾಯೆಯನು!
ಮಾಯದ ಸಂಸರದಲ್ಲಿ ಸಿಲುಕಿದೆನೆ!
ಎನ್ನ ದೇವ, ಚೆನ್ನಮಲ್ಲಿಕಾರ್ಜುನಯ್ಯ,!
ನಿಮ್ಮ ಹೊದ್ದುವಂತೆ ಮಾಡಾ ನಿಮ್ಮ ಧರ್ಮ.

೧೪.ಕಲ್ಲ ಹೊಕ್ಕರೆ ಕಲ್ಲ ಬಿರಿಸಿದೆ!
ಗಿರಿಯ ಹೊಕ್ಕರೆ ಗಿರೆಯ ಬಿರಿಸಿದೆ!
ಭಾವು ಸಂಸಾರವೇ, ಬೆನ್ನಿಂದ ಬೆನ್ನ ಹತ್ತಿ ಬಂದೆ!
ಚೆನ್ನಮಲ್ಲಿಕಾರ್ಜುನಯ್ಯ, ಇನ್ನೇವೆನಿನ್ನೇವೆ?!

೧೫. ಸಂಸಾರವೆಂಬ ಹಗೆಯಯ್ಯ, ತಂದೆ,
ಎನ್ನ ವಂಶ ತಪ್ಪದೆ ಆರಿಸಿಕೊಂಡು ಬರುತ್ತಿದೆಯಯ್ಯ!
ಎನ್ನ ವನರಸಿಯರಸಿ ಹಿಡಿದು ಕೊಲ್ಲುತ್ತಿದೆಯಯ್ಯ!
ನಿಮ್ಮ ವರೆವೊಕ್ಕೆ ಕಾಯಯ್ಯ!
ಎನ್ನ ಬಿನ್ನ ಪವನವಧಾರು, ಚೆನ್ನ ಮಲ್ಲಿಕಾರ್ಜುನಯ್ಯ!

೧೬.ಬೆಂದ ಸಂಸಾರ ಬಿಂಬಿಡದೆ ಕಾರುತ್ತಿರುವುದಯ್ಯ!
ಏವೆನಯ್ಯ ಏವೆನಯ್ಯ?
ಅಂದಂದಿನ ದಂಡುಗಕ್ಕೆ ಏವೆನಯ್ಯ ಏವೆನಯ್ಯ?
ಬೆಂದೊಡಲ ಹೊರೆವುದಕ್ಕೆ ನಾನಾರೆ!!
ಚೆನ್ನಮಲ್ಲಿಕಾರ್ಜುನ, ಕೊಲ್ಲು ಕಾಯಿ ನಿಮ್ಮ ಧರ್ಮ!

೧೭.	ತೆರಣಿಯ ಹುಳು ತನ್ನ ಸ್ನೇಹದಿಂದ ಮನೆಯ ವಾಡಿ

ತನ್ನ ನೂಲು ತನ್ನನೇ ಸುತ್ತಿ ಸುತ್ತಿ ಸಾವ ತೆರನಂತೆ!

ಮನ ಬಂದುದ ಬಯಸಿ ಬೇವುತ್ತಿರುವೆನಯ್ಯ!

ಅಯ್ಯ ಎನ್ನ ಮನದ ದುರಾಶೆಯ ಮಾಣಿಸಿ

ಚಿಮ್ಮುತ್ತ ತೋರಾ ಚೆನ್ನಮಲ್ಲಿಕಾರ್ಜುನ.

೧೮.ಒಂದಲ್ಲ, ಎರಡಲ್ಲ; ಮೊರಲ್ಲ, ನಾಲ್ಕಲ್ಲ–

ಎಂಬತ್ತುನಾಲ್ಕು ಲಕ್ಷ ಯೋನಿಯೊಳಗೆ

ಬಂದೆ ಬಂದೆ ಬಾರದ ಭವಂಗಳನುಂಡೆನುಂಡೆ ಸುಖಾಸುಖಂಗಳ!

ಹಿಂದಣ ಜನ್ಮಂಗಳು ತಾನೇನಾದಾರಾಗಲಿ

ಇಂದು ನೀ ಕರುಣಿಸು ಚೆನ್ನಮಲ್ಲಿಕಾರ್ಜುನ!

೧೯. ಪುಣ್ಯ ಪಾಪಂಗಳನರಿಯದ ಮೊದಲು

ಭವ ಭವಂಗಳಲ್ಲಿ ಬಂದೆನಯ್ಯ!

ನಂಬಿ ಬಂದು ಶರಣುಕೊಕ್ಕೆನಯ್ಯ!

ನಿಮ್ಮನಂದೂ ಅಗಲದಂತೆ ಮಾಡಿ ನಡೆಸಯ್ಯ

ನಿಮ್ಮ ಧರ್ಮ, ನಿಮ್ಮ ಧರ್ಮ!!

ನಿಮ್ಮನೊಂದನೇ ಬೇಡುವೆನು–

ಎನ್ನ ಬಂಧನವ ಬಿಡುವಂತೆ ಮಾಡಯ್ಯ ಶ್ರೀ ಚೆನ್ನಮಲ್ಲಿಕಾರ್ಜುನ!

೨೦. ಕೋಲ ತುಡಿಯ ಕೋಡಗದಂತೆ,

ನೇಣ ತುದಿಯ ಬೊಂಬೆಯಂತೆ!

ಆಡಿದೆನಯ್ಯ ನೀ ನುದಿಸಿದಂತೆ!

ನಾನಿದ್ದೆನಯ್ಯ ನೀನಿರಿಸಿದಂತೆ

ಜಗದ ಯಂತ್ರವಾಹಕ ಚೆನ್ನಮಲ್ಲಿಕಾರ್ಜುನಸಾಕೆಂಬನ್ನಕ!

೨೧.ಅಲ್ಲೆಂದೊಡೆ ಉಂಟೆಂಬುದೀ ಮಾಯೇ,

ಒಲ್ಲೆನೆಂದೊಡೆ ಬಿಡದೀ ಮಾಯೇ, ಎನಗಿದು ವಿದಿಯೇ?!

ಚೆನ್ನಮಲ್ಲಿಕಾರ್ಜುನಯ್ಯ, ಒಪ್ಪಿ ಮರೆವೊಕ್ಕೊಡೆ ಮತ್ತುಂಟೆ?

ಕಾಯಯ್ಯ ಶಿವಧೋ!

೨೨.ಕಾಯ ಮೀಸಲಾಗಿ ನಿನಗರ್ಪಿತವಾಯಿತು.

ಕರಣ ಮೀಸಲಾಗಿ ನಿನಗರ್ಪಿವಾಯಿತ್ತು. ಆನೊಂದರಿಯೆನಯ್ಯ,

ಎನ್ನ ಗತಿ ನೀನಾಗಿ, ಎನ್ನ ಮತಿ ನೀನಾಗಿ.

ಪ್ರಾಣ ನಿನಗರ್ಪಿತಾವಾಯಿತ್ತು,

ನೀನಲ್ಲದೆ ಪೆರತೊಂದ ನೆನೆದರೆ ಆಣೆ

ನಿಮ್ಮಾಣೆ ಚೆನ್ನಮಲ್ಲಿಕಾರ್ಜುನ!

೨೩.ಹಿಂದಣ ಹಳ್ಳ, ಮುಂದಣ ತೊರೆ,

ಸಲ್ಲುವ ಪರಿಯೆಂತು ಹೇಳಾ! ಹಿಂದಣ ಕೆರೆ, ಮುಂದಣ ಬಲೆ

ಹದುಲವಿನ್ನೆಲ್ಲಿಯದು ಹೇಳಾ!

ನೀನಿಕ್ಕಿದ ಮಾಯೆ ಕೊಲುತ್ತುವುದು

ಕಾಯಯ್ಯ ಕಾಯಯ್ಯ ಚೆನ್ನಮಲ್ಲಿಕಾರ್ಜುನ.

೨೪.ಭವಭವದಲ್ಲಿ ತೊಳಲಿ ಬಳಲಿತ್ತೆನ್ನ ಮನ;

ಆನೇವೆನಯ್ಯ,

ಹಸಿದುಂಡೊಡೆ, ಉಂಡು ಹಸಿವಾಯಿತ್ತು!

ಇಂದು ನೀನೊಲಿದೆಯಾಗಿ

ಇನಗೆ ಅಮೃತದ ಆಪ್ಯಾಯನವಾಯಿತ್ತು.

ಇದ್ದು ಕಾರಣ ನೀನಿಕ್ಕಿದ ಮಾಯೆಯನಿನ್ನು ಮೆಟ್ಟಿದೆನಾದೊಡೆ

ಆಣೆ ನಿಮ್ಮಾಣೆ ಚೆನ್ನಮಲ್ಲಿಕಾರ್ಜುನ.

೨೫.ಹರಿಯ ನುಂಗಿತ್ತು ಮಾಯೆ! ಅಜನ ನುಂಗಿತ್ತು ಮಾಯೆ!
ಇಂದ್ರನ ನುಂಗಿತ್ತು ಮಾಯೆ! ಚಂದ್ರನ ನುಂಗಿತ್ತು ಮಾಯೆ!
ಬಲ್ಲೆನೆಂಭ ಬಲುಗೈಯರ ನುಂಗಿತ್ತು ಮಾಯೆ!
ಅರಿಯಂಬ ಅಜ್ಞಾನಿಗಳ ನುಂಗಿತ್ತು ಮಾಯೆ!
ಈರೇಳು ಭುವನವನಾರಡಿಗೊಂಡಿತ್ತು ಮಾಯ್!
ಚೆನ್ನಮಲ್ಲಿಕಾರ್ಜುನಯ್ಯ,
ಎನ್ನ ಮಾಯೆಯ ಮಾಣಿಸಾ ಕರುಣಿ!

೨೬.ಕಾಯಕ್ಕೆ ನೆಳಲಾಗಿ ಕಾಡಿತ್ತು ಮಾಯೆ!
ಪ್ರಾಣಕ್ಕೆ  ಮನವಾಗಿ ಕಾಡಿತ್ತು ಮಾಯೆ!
ಮನಕ್ಕೆ ನೆನಹಾಗಿ ಕಾಡಿತ್ತು ಮಾಯೆ!
ನೆನಹಿಂಗೆ ಅರಿವಾಗಿ ಕಾಡಿತ್ತು ಮಾಯೆ!
ಜಗದ ಜಂಗುಳಿಗೆ ಬೆಂಗೋಲನೆತ್ತಿ ಕಾಡಿತ್ತು ಮಾಯೆ!
ಚೆನ್ನಮಲ್ಲಿಕಾರ್ಜುನ, ನೀನೊಡ್ಡಿದ ಮಾಯೆಯನಾರೂ ಗೆಲಬಾರದು!

೧೭.  ಬಿಟ್ಟೆನೆಂದರೆ ಬಿಡದೀ ಮಾಯೆ!
ಬಿಡದಿದ್ದರೆ ಬೆಂಬತ್ತಿತ್ತು ಮಾಯೆ!
ಯೋಗಿಗೆ ಯೋಗಿಣಿಯಾಯಿತ್ತು ಮಾಯೆ!
ಸವಣಂಗೆ ಸವಣೆಯಾಯಿತ್ತು ಮಾಯೆ!
ಯತಿಗೆ ಪರಾಕಿಯಾಯಿತ್ತು ಮಾಯೆ!
ನಿನ್ನ ಮಾಯೆಗೆ ನಾನಂಜುವಳಲ್ಲ
ಚೆನ್ನಮಲ್ಲಿಕಾರ್ಜುನದೇವ, ನಿಮ್ಮಾಣೆ.

೨೮. ಬಿಬಿಟ್ಟೆರ್ಪನೆಂದೊಡಂ ಬಿಡದು ನಿನ್ನ ಮಾಯೆ!

ಒಟ್ಟಯಿಸಿ ಬಂದೊಡೊಡವಂದಪುದೀ ಮಾಯೆ!

ಬಿಡದು ನಿನ್ನಯ ಮಾಯೆ ಒಟ್ಟಯಿನಿ ನಿಂದೊಡಂ!

ಒಡವಂದರೊಡಬಪ್ಪುದೀ ಮಾಯೆ ಸಂಗಡಂ!

ಜೊಗಿಗಂ ಜೋಗಿಣಿಯದಾಯ್ತು ನಿನ್ನ ಮಾಯೆ!

ರಾಗದಿಂ ಸವಣಂಗೆ ಕಂತಿಯಾಯ್ತೀ ಮಾಯೆ!

ಭಗವಂಗೆ ಮಾಸಕಬೆಯ ಚೋಹವಾಯ್ತಯ್ಯ!

ಬಗೆವರಾರವಗಿಗವರಂದವಾಯಿತ್ತಯ್ಯ!

ಗಿರಿಯನೇರಿದೊಡಿರದೆ ಗಿರಿಯನೇರಿತು ಮಾಯೆ!

ಪರಿದಡವಿಯೊ ಪೊಕ್ಕದೊಡನೆ ಪೊಕ್ಕದು ಮಾಯೆ!

ಬೆನ್ನ ಕೈಯಂ ಬಿಡದು ಭಾಪು ಸಂಸಾರವೆ!

ಎನ್ನಂ ನಂಬಿಸಿತು ಮರು ಪೊತು ಸಂಸಾರವೆ!

ಕರುಣಾಕರ ನಿನ್ನ ಮಾಯೆಗುಂಜುವೆನಯ್ಯ!

ಪರೆಮೇಶ್ವರ ಮಲ್ಲಿನಾಥ ಕರುನಿಪುದಯ್ಯ!

ಇನ್ನೀವೆನಿನ್ನೇವೆನಯ್ಯೋ ಮಹಾದೇವ

ಪನ್ನಗಾಭರಣ ಕರುಣಿಸುವುದೆಲೆ ಮಹದೇವ

೨೯. ಎನ್ನ ಮಾಯದ ಮದವ ಮುರಿಯಯ್ಯ!

ಎನ್ನ ಕಾಯದ ಕಳವಳವ ಕೆಡಿಸಯ್ಯ!

ಎನ್ನ ಜೀವದ ಜಂಜಡವ ಬಿಡಿಸಯ್ಯ,

ಎನ್ನ ದೇವ ಚೆನ್ನಮಲ್ಲಿಕಾರ್ಜುನಯ್ಯ,

ಎನ್ನ ಸುತ್ತಿದ ಮಾಯಾಪ್ರಪಂಚವ ಬಿಡಿಸಾ ನಿಮ್ಮ ಧರ್ಮ!

೩೦. ವರಚಕ್ರ ಬೆಸಗೆಯ್ವೊಡೆ ಅಲಗಿನ ಹಂಗೇಕೆ?

ಪರುಷ ಕೈಯಲುಳ್ಳಡೆ ಸಿರಿಯ ಹಂಗೇಕೆ?

ಮಾಣಿಕ್ಯದ ಬೆಳಗುಳ್ಳೊಡೆ ಜ್ಯೋತಿಯ ಹಂಗೇಕೆ?

ಕಾಮಧೇನು ಕರೆವಡೆ ಕರುವಿನ ಹಂಗೇಕೆ?

ಎನ್ನ ದೇವ ಶ್ರೀಶೈಲ ಚೆನ್ನಮಲ್ಲಿಕಾರ್ಜುನುಳ್ಳೊಡೆ

ಮರಳಿ ಸಂಸಾರದ ಹಂಗೇಕೆ?

೩೧. ಊರ ಸೀರೆಗೆ ಅಸಗ ತಡಬಡಗೊಂಬಂತೆ

ಹೊನ್ನೆನ್ನದು, ಹೆಣ್ಣೆನ್ನದು ಮಣ್ಣೆನ್ನದು ಎಂದು ನೆನೆನೆನೆದು

ನಿಮ್ಮನರಿಯದ ಕಾರಣ ಕೆಮ್ಮನೆ ಕೆಟ್ಟನಯ್ಯ

ಚೆನ್ನಮಲ್ಲಿಕಾರ್ಜುನಯ್ಯ.

೩೨. ದೇವ ಎನಗೆ ಭವಿಯ ಸಂಗವೆಂದು ಮಾಣ್ಬುದೆನ್ನ ತಂದೆ

ದೇವ ಬೆರಕೆಯಿಲದಚ್ಚಬಕುತಿ ಸುಖವದೆಂದು ತಂದೆ!

ಪೂಜೆಯೊಳಗೆ ವೆಚ್ಚ ಬೆಚ್ಚ ಮನವನೆಂತು ತೆಗೆವನಯ್ಯ!

ಪೂಜೆಯೊಳಗೆ ನಟ್ಟ ದಿಟ್ಟಿಗಳನದೆಂತು ಕೀಳ್ವೆನಯ್ಯ!

[ಚೆನ್ನಮಲ್ಲಿಕಾರ್ಜುನ]

೩೩. ದೇವ ಶಿವಲಾಂಛವನೇರಿಸಿಕೊಂಡು

ಮನೆಗೆ ಬಂದವರಂ ಕಡೆಗಣಿಸೆ

ಎಂತು ನೋಡುತಿರ್ಪ್ಪೆನ್?

ಅವರ್ಗೆ ಸಕಾರವಂ

ಮಾಡಲಿಲ್ಲದಿರ್ದೊಡೆ

ಎನ್ನನೀ ಧರೆಯ ಮೇಲಿರಿಸುವ ಕಾರಣವೇನಭವ!?

ನಿನ್ನವಳೆಂದನ್ನ ಮುದ್ದುತನವ ಸಲಿಸುವೊಡಿರಿಸುವುದು

ಇಲ್ಲಾ ಕೈಲಾಸಕ್ಕೆ ಕೊಂಡೊಯ್ಯುದು [ಚೆನ್ನಮಲ್ಲಿಕಾರ್ಜುನ]

೩೪.ಅಶನದಾಶೆಯಂ, ತೃಷೆಯ ತೃಷ್ಣೆಯಂ,
ಬೆಸನದ ಬೇಗೆಯಂ, ವಿಷಯದ ವಿಹ್ವಳತೆಯಂ,
ತಾಪತ್ರಯ ಕಲ್ಪನೆಗಳಂ ಗೆಲಿದೆ
ಇನ್ನೇನಿನ್ನೇನೆನಿಚ್ಛೆಯಾದುದು
ಚೆನ್ನಮಲ್ಲಿಕಾರ್ಜುನ, ನಿನಗಂಜೆನಂಜೆ!

೩೫.ಶಿವನೇ, ಉಳಿವ ಕರೆವ ನೇಹವುಂಟೆ?
ಸಂಸಾರಕ್ಕಂ ನಿಮ್ಮಲ್ಲಿಗೆಹೆಯಾಹುವ ಬಕ್ತಿಯುಂಟೆ?
ಏನೆಂದು ಪೇಲ್ವೆ ಲಜ್ಜೆಯ ಮಾತ, [ಚೆನ್ನ ಮಲ್ಲಿಕಾರ್ಜುನ]

೩೬.ಒಳಗೆ ಶೋಧಿಸಿ, ಹೊರಗೆ ಶುದ್ದವಿಸಿ,
ಒಳ–ಹೊರಗೆಂಬ ಉಭಯಶಂಕೆಯ ಕಳೆದು,
ಸ್ಪಟಿಕದ ಶಲಾಕೆಯಂತೆ ತಳವೆಳಗುಮಾಡಿ,
ಸುಕ್ಷೇತ್ರವನರಿದು ಬೀಜವ ಬಿತ್ತುವಂತೆ,
ಶಿಷ್ಯನ ಸರ್ವಪ್ರಪಂಚ ನಿವೃತ್ತಿಯಂ ಮಾದಿ, ನಿಜೋಪದೇಶವನಿತ್ತು
ಆ ಶಿಷ್ಯನ ನಿಜದಾದಿಯನ್ನೈದಿಸುವನೀಗ ದೀಕ್ಷಾಗುರು!
ಆ ಸಹಜಗುರುವೀಗ ಜಗದಾರಾಧ್ಯನು!
ಅವನ ಶ್ರೀಪಾದಕ್ಕೆ ನಮೋ ನಮೋ ಎಂಬೆ ಕಾಣಾ ಚೆನ್ನಮಲ್ಲಿಕಾರ್ಜುನ!

೩೭.ಗುರುವೆಂಬ [ತೆತಿಗನೆನಗೆ]
ಲಿಂಗವೆಂಬಲಗನು ಮನನಿಷ್ಠೆಯೆಂಬ ಕೈಯಲ್ಲಿ ಕೊಡಲು
ಕದುವೆನು, ಗೆಲುವೆನು ಕಾಮನೆಂಬವನ।
ಕ್ರೋಧಾದಿಗಳು ಕೆಟ್ಟು, ವಿಷಯಂಗಳೋಡಿದವು
ಅಲಗು ಎನ್ನೊಳಗೆ ನಟ್ಟು, ಆನಳಿದ ಕಾರಣ
ಚೆನ್ನಮಲ್ಲಿಕಾರ್ಜುನಲಿಂಗವ ಕರದಲ್ಲಿ ಹಿಡಿದೆ!

೩೮.ಗುರುವಿನ ಕರುಣದಿಂದ ಲಿಂಗ–ಜಂಗಮವ ಕಂಡೆ!

ಗುರುವಿನ ಕರುಣದಿಂದ ಪಾದೋದಕ–ಪ್ರಸಾದವ ಕಂಡೆ!

ಗುರುವಿನ ಕರುಣದಿಂದ ಸಜ್ಜನಸದ್ಭಕ್ತರ ಗೋಷ್ಠಿಯ ಕಂಡೆ!

ಚೆನ್ನಮಲ್ಲಿಕಾರ್ಜುನಯ್ಯ,

ನಾ ಹುಟ್ಟುಲೊಡನೆ ಮಿಭೂತಿಯ ಪಟ್ಟವ ಕಟ್ಟಿ

ಸದ್ಗುರುಸ್ವಾಮಿ ಲಿಂಗಸ್ವಾಯತವ ಮಾಡಿದನಾಗಿ ಧನ್ಯಳಾದೆನು!

೩೯.ಗುರುವಿನ ಕರುಣದಿಂದ ಲಿಂಗಜಂಗಮವ ಕಂಡೆ.

ಗುರುವಿನ ಕರುಣದಿಂದ ಪಾದೋದಕ ಪ್ರಸಾದವ ಕಂಡೆ.

ಗುರುವಿನ ಕರುಣದಿಂದ ಸಜ್ಜನ ಸದ್ಭಕ್ತರ ಗೋಷ್ಠಿಯ ಕಂಡೆ.

ಚೆನ್ನಮಲ್ಲಿಕಾರ್ಜುನಯ್ಯ, ನಾ ಗುಟ್ಟುಲೊಡನೆ

ಮಿಭೂತಿಯ ಪಟ್ಟವ ಕಟ್ಟಿ ಸದ್ಗುರುಸ್ವಾಮಿ

ಲಿಂಗಸ್ವಾಯತವ ಮಾಡಿದನಾಗಿ ಧನ್ಯಳಾದೆನು!

೪೦. ಅರಸಿ ಮರವೊಕ್ಕಡೆ ಕಾವ ಗುರುವೇ,

ಜಯ ಜಯ ಗುರುವೇ!

ಆರೂ ಅರಿಯದ ಬಯಲೊಳಗೆ ಬಯಲಾಗಿ

ನಿಂದ ನಿಲವ ಹಿದಿದೆನ್ನ ಕರದಲ್ಲಿ ತೋರಿದ ಗುರುವೇ.

ಚೆನ್ನಮಲ್ಲಿಕಾರ್ಜುನ ಗುರುವೆ, ಜಯ ಜಯ ಗುರುವೇ.

೪೧.ಶ್ರೀ ಗುರುಲಿಂಗದೇವರು ತಮ್ಮ ಹಸ್ತವ ತಂದು

ಎನ್ನ ಮಸ್ತಕದ ಮೇಲೆ ಇರಿಸಿದಾಗಳೇ

ಎನ್ನ ಭವಂ ನಾಸ್ತಿಯಾಯಿತ್ತು! ಎನ್ನ ತನ್ನಂತೆ ಮಾದಿದ!

ಎನಗೆ–ತನಗೆ ತೆರಹಿಲ್ಲದಂತೆ ಮಾಡಿ ತೋರಿದನು ನೋಡಾ!

ತನ್ನ ಕರಸ್ಥಲದಲ್ಲಿದ್ದ ಮಹಾಲಿಂಗವನು

ಎನ್ನ ಕರಸ್ಥಲದಲ್ಲಿ ಮೂರ್ತಿಗೊಳಿಸಿದ!

ಎನ್ನ ಕರಸ್ಥಲದಲ್ಲಿದ್ದ ಮಹಾಲಿಂಗವನು

ಎನ್ನ ಮನಸ್ಥಲದಲ್ಲಿ ಮೂರ್ತಿಗೊಳಿಸಿದ!

ಎನ್ನ ಮನಸ್ಥಲದಲ್ಲಿದ್ದ ಮಹಾಲಿಂಗವನು!

ಎನ್ನ ಭಾವಸ್ಥಲದಲ್ಲಿ ಮೂರ್ತಿಗೊಳಿಸಿದ!

ಎನ್ನ ಭಾವಸ್ಥದಲ್ಲಿದ್ದ ಮಹಾಲಿಂಗವನು

ಎನ್ನ ಜ್ಞಾನಸ್ಥಲದಲ್ಲಿ ಮೂರ್ತಿಗೊಳಿಸಿದ!

ಎನ್ನ ಜ್ಞಾನಸ್ಥಲದಲ್ಲಿದ್ದ ಮಹಾಲಿಂಗವನು

ಎನ್ನ ಸರ್ವಾಂಗದೊಳಹೊರಗೆ ತೆರೆಹಿಲ್ಲದಳವಡಿಸಿದ

ನಮ್ಮ ಗುರುಲಿಂಗದೇವ ಚೆನ್ನಮಲ್ಲಿಕಾರ್ಜುನ!

೪೨.ನಿತ್ಯವೆನ್ನ ಮನೆಗೆ ನಡೆದು ಬಂದಿತ್ತು!

ಮುಕ್ತಿಯೆನ್ನ ಮನೆಗೆ ನಡೆದು ಬಂದಿತ್ತು!

ಜಯ ಜಯ ಗುಫ್ರು ನಮೋ

ಪರಮ ಗುರುವೆ ನಮೋ ನಮೋ

ಚೆನ್ನಮಲ್ಲಿಕಾರ್ಜುನನ ತಂದೆನಗೆ ತೋರಿ ಕೊಟ್ಟ

ಗುರುವೆ ನಮೋ ನಮೋ!

೪೩.ನರ–ಜನ್ಮವ ತೊಡೆದು

ಹರ–ಜನ್ಮವ ಮಾಡಿದ ಗುರುವೆ!

ಭವವಂಧನವ ಬಿಡಿಸಿ

ಪರಮಸುಖವ ತೋರಿದ ಗುರುವೆ!

ಭವಿ ಎಂಭುದ ತೊಡೆದು

ಭಕ್ತೆ ಎಂದೆನಿಸಿದ ಗುರುವೆ!

ಚೆನ್ನಮಲ್ಲಿಕಾರ್ಜುನ ತಂದೆನ್ನ ಕೈವಶಕೆ

ಕೊಟ್ಟ ಗುರುವೆ ನಮೋ ನಮೋ!

೪೪.ಸಂಸಾರಸಾಗರದೊಳಗೆ ಬಿದ್ದೆ ನೋಡಾ ನಾನು!

ಸಂಸಾರ ನಿಸ್ಸಾರವೆಂದು ತೋರಿದನೆನಗೆ ಗುರು!

ಅಂಗವಿಕಾರದ ಸಂಗವ ನಿಲಿಸಿ,

ಲಿಂಗವನಂಗದ ಮೇಲೆ ಸ್ಥಾಪ್ಯವ ಮಾರಿದನೆನ್ನ ಗುರು.

ಹಿಂದಣ ಜನ್ಮವ ತೊಡೆದು,

ಮುಂದಣ ಪಥವ ತೋರಿದನೆನ್ನ ತಂದೆ!

ಚೆನ್ನಮಲ್ಲಿಕಾರ್ಜುನನ ನಿಜವನರುಹಿದನೆನ್ನ ಗುರು!

೪೫.ಅರಲುಗೊಂಡ ಕೆರೆಗೆ ತೊರೆ ಬಂದು ಹಾಯ್ದಂತೆ,

ಬರಲುಗೊಂಡ ಸಸಿಗೆ ಮಳೆ ಸುರಿದಂತಾಯ್ತು ನೋಡಾ!

ಇಂದೆನಗೆ ಇಹದ ಸುಖ, ಪರದ ಗತಿ ನಡೆದು ಬಂದಂತಾಯಿತ್ತು

ನೋಡಾ! ಚೆನ್ನಮಲ್ಲಿಕಾರ್ಜುನಯ್ಯ, ಗುರುಪಾದವ ಕಂಡು

ಧನ್ಯಳಾದೆನು ನೋಡಾ!

೪೬. ಲೋಕದ ಚೇಷ್ಟೆಗೆ ರವಿ ಬೀಜವಾದಂತೆ

ಕರಣಂಗ ಚೇಷ್ಟೆಗೆ ಮನವೇ ಬೀಜ

ಎನಗುಳ್ಳದೊಂದು ಮನ,

ಆ ಮನ ನಿಮ್ಮಲ್ಲಿ ಒಡವೆರೆದ ಬಳಿಕ

ಎನಗೆ ಭಯವುಂಟೆ ಚೆನ್ನಮಲ್ಲಿಕಾರ್ಜುನಯ್ಯ!

೪೭.ಅಂಗವ ಲಿಂಗಮುಖಕ್ಕೆ ಅರ್ಪಿಸಿ

ಅಂಗ ಅನಂಗವಾಯಿತ್ತು!

ಮನವ ಅರಿವಿಂಗರ್ಪಿಸಿ ಮನ ಲಯವಾಯಿತ್ತು

ಭಾವವ ತೃಪ್ತಿಗರ್ಪಿಸಿ ಭಾವ ಬಯಲಾಯಿತ್ತು!

ಅಂಗ–ಮನ–ಭಾವವಳಿದ ಕಾರಣ ಕಾಯ ಅಕಾಯವಾಯಿತ್ತು!

ಎನ್ನ ಅಕಾಯದ ಸುಖದ ಲಿಂಗ ಭೋಗಿಸುವನಾಗಿ

ಶರಣಸಿ–ಲಿಂಗಪತಿಯಾದೆನು!

ಇದು ಕಾರಣ ಚೆನ್ನಮಲ್ಲಿಕಾರ್ಜುನಯ್ಯನೆಂಬ

ಗಂಡನ ಒಳಹೊಕ್ಕು ಬೆರಸಿದೆನು!!

೪೮.ಹರನೇ ನೀನೆನಗೆ ಗಂಡನಾಗಬೇಕಂದು

ಅನಂತಕಾಲ ತಪಿಸಿದ್ದೆ ನೋಕಾ!

ಹಸೆಯ ಮೇಲಣ ಮಾತ ಬೆಸಗೊಳಲಟ್ಟಿದರೆ

ಶಶಿಧರನ ಹತ್ತಿರಕ್ಕೆ ಕಳುಹಿದರೆಮ್ಮವರು!

ಭಸ್ಮವನೇ ಕಂಕಣವನೆ ಕಟ್ಟಿದರು

ಚೆನ್ನಮಲ್ಲಿಕಾರ್ಜುನ, ತನಗೆ ನಾನಾಗ ಬೇಕೆಂದು!

೪೯. ಜಲದ ಮಂಟಪದ ಮೇಲೆ

ಉರಿಯ ಚಪ್ಪರವನಿಕ್ಕಿ,

ಆಲಿಕಲ್ಲ ಹಸೆಯ ಹಾಸಿ, ಬಾಸಿಗ ಕಟ್ಟಿ

ಕಾಲಿಲ್ಲದ ಹೆಂಡತಿಗೆ

ತಲೆಯಿಲ್ಲದ ಗಂಡ ಬಂದು ಮುಟ್ಟಿದನು ನೋಕಾ!

ಎಂದೆಂದೂ ಬಿಡದ ಬಾಳುವೆಗೆ ಕೊಟ್ಟರೆನ್ನ

ಚೆನ್ನಮಲ್ಲಿಕಾರ್ಜುನಯ್ಯನಿಗೆ!

೪೯.ಎನ್ನ ನಾನರಿಯದಂದು, ಮುನ್ನ ನೀನೆಲ್ಲಿರ್ದೆ ? ಹೇಳಯ್ಯ !

ಚಿನ್ನದೊಳಗಣ ಬಣ್ಣದಂತೆ ಎನ್ನೊಳಗಿರ್ದೆಯಯ್ಯ!

ಎನ್ನೊಳಗಿರ್ದು ಮೈದೋರದ ಭೇದವ

ನಿಮ್ಮಲ್ಲಿ ಕಂಡೆನು ಕಾಣಾ ಚೆನ್ನಮಲ್ಲಿಕಾರ್ಜುನ

೫೦.ಅಂಗ ಲಿಂಗವ ವೇದಿಸಿ

ಅಂಗ ಲಿಂಗದೊಳಗಾಯಿತ್ತು!

ಮನ ಲಿಂಗವ ವೇಧಿಸಿ

ಮನಲಿಂಗದೊಲಗಾಯಿತ್ತು!

ಭಾವ ಲಿಂದೊಳಗಾಯಿತ್ತು!

ಚೆನ್ನಮಲ್ಲಿಕಾರ್ಜುನ, ನಿಮ್ಮ ಒಲುಮೆಯ ಸಂಗದಲ್ಲಿರ್ದು

ಸ್ವಯಲಿಂಗಿಯಾದೆನು

೫೧. ನಿನ್ನರಿಕೆಯ ನರಕವೇ ಮೋಕ್ಷ ನೋಡಯ್ಯ!

ನಿನ್ನರಿಯದ ಮುಕ್ತಿಯೇ ನರಕ ಕಂಡಯ್ಯ!

ನೀನೊಲ್ಲದ ಸುಖವೇ ದು:ಖ ಕಂಡಯ್ಯ!

ನೀನೊಲಿದ ದು:ಖವೇ ಪರಮಸುಖ ಕಂಡಯ್ಯ!

ಚೆನ್ನಮಲ್ಲಿಕಾರ್ಯನಯ್ಯ,

ನೀ ಕಟ್ಟಿ ಕೆಡಹಿದ ಬಂಧನವೇ ನಿರ್ಬಂದನವೆಂದಿಪ್ಪೆನು!

೫೨.ಹಾಲು ತುಪ್ಪವ ನುಂಗಿ ಬೇರಾಗಬಲ್ಲುದೇ?

ಸೂರ್ಯಕಾಂತದಗ್ನಿಯನಾರು ಭೇದಿಸಬಲ್ಲರು?

ಅಪ್ಪರವಹಿಮ ಚೆನ್ನಮಲ್ಲಿಕಾರ್ಜುನನೆನ್ನೊಳಡಗಿಪ್ಪ ಪರಿಯ

ಬೇರಿಲ್ಲದೆ ಕಂಡು ಕಣ್ದೆರೆದೆನು

೫೩.ಘನವ ಕಂಡೆ, ಅನುವ ಕಂಡೆ!

ಅಯತ–ಸ್ವಾಯತ–ಸನ್ನಿಹಿತ ಸುಖವ ಕಂಡೆ!

ಅರಿವನರಿದು ಮರಹ ಮರೆದೆ!

ಕುರುಹಿನ ಮೋಹದ ಮರಯನೀಡಾಡಿದೆ!

ಚೆನ್ನಮಲ್ಲಿಕಾರ್ಜುನ, ನಿಮ್ಮನರಿದು ಸೀಮೆಗೆಟ್ಟೆನು!!

೫೪. ಕ್ರೀಗಳು ಮುಟ್ಟಲರಿಯವು ನಿಮ್ಮನೆಂತು ಪೂರಿಸುವೆ?!

ಜಾದ–ಬಿಂದುಗಳು ಮುಟ್ಟಲರಿಯವು ನಿಮ್ಮನೆಂದು ಹಾಡುವೆ?

ಕಾಯ ಮುಟ್ಟುವೊಡೆ ಕಾಣಬಾರದೆ ಘನವು!–

ನಿಮ್ಮನೆಂತು ಕರಸ್ಥಲದಲ್ಲಿ ದರಿಸುವೆ?

ಚೆನ್ನಮಲ್ಲಿಕಾರ್ಜುನನಯ, ನಾನೇನೆಂದರಿಯದೆ

ನಿಮ್ಮ ನೋಡಿ ನೋಡಿ ಸ್ಯೆವೆರಗಾಗುತಿರ್ದನು.

೫೬. ಸನ್ನನವಾಗಿ ಮಜ್ಜನಕ್ಕೆರೆವೆ!

ಶಾಂತಳಾಗಿ ಪೂಜೆಯ ಮಾಡುವೆ!

ರಮರತಿಯಿಂದ ನಿಮ್ಮ ಕೊಡುವೆ

ಚೆನ್ನಮಲ್ಲಿಕಾರ್ಜುನಯ್ಯ,

ನಿಮ್ಮನಗಲದ ಪೂಜೆ ಅನುವಯಿತ್ತೆನಗೆ!

೫೭. ಎಲ್ಲ ಎಲ್ಲವನರಿದು ಫಲವೇನಯ್ಯ?–

ತನ್ನ ತಾನರಿಯಬೇಕಲ್ಲದೆ?

ತನ್ನಲ್ಲಿ ಅರಿವು ಸ್ವಯವಾಗಿರಲು ಅನ್ಯರ ಕೇಳಲುಂಟೆ?

ಚೆನ್ನಮಲ್ಲಿಕಾರ್ಜುನ, ನೀ ಅರಿವಾಗಿ ಮುಂದೋರಿದ ಕಾರಣ

ನಿಮ್ಮಿಂದ ನಿಮ್ಮನರಿದೆನಯ್ಯ, ಪ್ರಭುವೆ,

೫೮. ಚಂದನವ ಕರಿದು ಕೊರೆದು ತೇದೊಡೆ

ನೊಂದೆನೆಂದು ಕಂಪ ಬಿಟ್ಟಿತ್ತೆ?

ತಂದು ಸುವರ್ಣ ಕರಿದೊರೆದೊಡೆ ಬೆಂದು ಕಳಂಕ ಹಿಡಿದಿತ್ತೆ?

ಸಂದುಸಂದನು ಕಡಿದು ಕಬ್ಬನು ತಂದು ಗಾಣದಲಿಕ್ಕಿ ಅರೆದೆಡೆ

ಬೆಂದು ಪಾಕಗೊಲ ಸಕ್ಕರೆಯಾಗಿ ನೊಂದೆನೆಂದು ಸವಿಯ ಬಿಟ್ಟಿತ್ತೆ?

ನಾ ಹಿಂದೆ ಮಾಡಿದ ಹೀನಂಗಳೆಲ್ಲವ ತಂದು ಮುಂದಿಳುಹಲು

ನಿಮಗೆ ಹಾನಿ!

ಎನ್ನ ತಂದೆ ಚೆನ್ನ ಮಲ್ಲಿಕಾರ್ಜುನದೇವಯ್ಯ,

ಕೊಂದೊಡೆ ಶರಣೆಬುದ ಮಾಣೆ

೫೯. ಒಡಲ ಕಳವಕ್ಕಗಿ ಅಡವಿಯ ಹೊಕ್ಕೆನು

ಗಿಡುಗಿಡುದಪ್ಪದೆ ಬೇಡಿದೆನ್ನಂಗಕ್ಕೆಂದು.

ಅವು ನೀಡಿದವು ತಮ್ಮ ಲಿಂಗೆಕ್ಕೆಂದು

ಅನು ಬೇಡಿ ಭವಿಯಾದೆನು,

ಅವು ನೀಡಿ ಭಕ್ತರಾದವು!

ಇನ್ನು ಬೇಡಿಡೆಃನಾದರೆ, ಚೆನ್ನಮಲ್ಲಿಕಾರ್ಜುನಯ್ಯ, ನಿಮ್ಮಣೆ!

೬೦.ಗಿರಿಯೊಳು ವನದೊಳು ಗಿರಗಿದದತ್ತ-

ದೇವ, ಎನ್ನ ದೇವ ಬಾರಯ್ಯ ತೊರಯ್ಯ ನಿಮ್ಮ ಕರುಣನೆಂದು

ನಾನು ಅರಸುತ್ತ ಅಳಲುತ್ತ ಕಾಣದೇ ಸುಯಿದು ಬಂದು

ಕಂಡೆ ಶರಣರ ಸಂಗದಿದ!

ಅರಸಿ ಹೆಡಿದೇನಂದು ನೀನಡಗುವ ಠಾವ ಹೇಳಾ

ಚೆನ್ನಮಲ್ಲಿಕಾರ್ಜುನ!

೬೧. ಪೃಥ್ವಿಯ ಗೆಲಿದ ಏಲೇಶ್ವರನ ನಾನು ಕಂಡೆ

ಭಾವಭ್ರಮೆಯ ಗೆಲಿದ ಬ್ರಹ್ಮೇಶ್ವರನ ನಾನು ಕಂಡೆ

ಸತ್ವ-ರಜ-ತಮ ತ್ರಿವಿಧವ ಗೆಲಿದ ತ್ರಿಪುರಾಂತಕನ ಕಂಡೆ

ಅಂತರಂಗ-ಆತ್ಮಜ್ಞಾನದಿಂದ ಜ್ಯೋತಿಸಿದ್ದಯ್ಯನ ನಾನು ಕಂಡೆ

ಇವರೆಲ್ಲರ ಮದ್ಯಮಸ್ಥಾನ ಪ್ರಾಣಲಿಂಗವೆಂದು

ಸುಜ್ಞಾನದಲ್ಲಿ ತೋರಿದ ಆ ಬಸವಣ್ಣನ ಪ್ರಸಾದದಿಂದ

ಚೆನ್ನಮಲ್ಲಿಕಾರ್ಜುನನ ಕಂಡೆನಯ್ಯ.

೬೨. ಅಪಾರ ಗಂಭೀರದ ಅಂಬುಧಿಯಲ್ಲಿ

ತಾರಪಥವ ನೋಡಿ ನಡೆಯೆ.

ಬೈತ್ರದಿಂದ ದ್ವೀಪಾಂತರಕ್ಕೆ ಸಕಲಪದಾರ್ಥವನೆಯ್ದಿಸುವುದು

ಎನ್ನ ದೇವ ಚೆನ್ನಮಲ್ಲಿಕಾರ್ಜುನಯ್ಯ ಸಮೀಪ

ತುರ್ಯಸಂಭಷಣೆಯನರಿದಡೆ ಮುನ್ನಿನಲ್ಲಿಗೆಯ್ದಿಸುವುದು

೬೩. ಕ್ರೀಯುಳ್ಳೊಡಂತೊಂದಾಸೆ!

ಸದ್ಭಕ್ತರ ನುಡಿಗಡಣ ಉಳ್ಳೊಡಂತೊಂದಾಸೆ!

ಶ್ರೀಗಿರಿಯನೇರಿ ನಿಮ್ಮ ಬೆರಸಿದರೆ ಎನ್ನಾಸೆಗೆ ಕಡೆಯೇ ಅಯ್ಯ?

ಆವಾಸೆಯೂ ಎಲ್ಲದೆ ನಿಮ್ಮ ನಂಬಿ ಬಂದು ಕೆಟ್ಟೆನಯ್ಯ

ಚೆನ್ನಮಲ್ಲಿಕಾರ್ಜುನ.

೬೪. ಆರೂ ಇಲ್ಲದವಳೆಂದ

ಆಳಿಗೊಳಲು ಬೇಡ ಕಂಡಯ್ಯ?

ಏನ ಮಾಡಿದಡೆಯೂ ನಾನು ಅಂಜುವಳಲ್ಲ

ತರಗೆಲೆಯ ಮೆಲಿದು ನಾನಿಹೆನು

ಸುರಗಿಯ ಮೇಲೊರಗಿ ನಾನಿಹೆನೆ!

ಚೆನ್ನಮಲ್ಲಿಕಾರ್ಜುನಯ್ಯ

ಕರ (ಕಡೆ ನೋಡಿದಡೆ)

ಒಡಲನೂ ಪ್ರಾಣವನೂ ನಿಮಗೊಪ್ಪಿಸಿ ಶುದ್ಧಳಹೆನು,

೬೫. ಕಿಡಿಕಿಡಿ ಕೆದರಿದರೆ
ಎನಗೆ ಹಸಿವು ತೃಷೆ ಅಡಗಿತ್ತೆಂಬೆನು!
ಮುಗಿಲು ಹರಿದು ಬಿದ್ದರೆ
ಎನಗೆ ಮಜ್ಜನಕ್ಕೆರೆದರೆಂಬೆನು!
ಗಿರಿ ಮೇಲೆ ಬಿದ್ದರೆ ಎನಗೆ ಪುಷ್ಪವೆಂಬೆನು!
ಚೆನ್ನಮಲ್ಲಿಕಾರ್ಜುನಯ್ಯ, ಶಿರ ಹರಿದು ಬಿದ್ದರೆ
ಪ್ರಾಣ ನಿಮಗರ್ಪಿತವೆಂಬೆನು!

೬೭. ಒಡಲಿಲ್ಲದ, ನುಡಿಯಿಲ್ಲದ, ಕಡೆಯಿಲ್ಲದ
ನಲ್ಲನ ಒಡಗೂಡಿ ಸುಖಿಯಾದೆ ಕೇಳಿರಯ್ಯ!
ಭಾಷೆ ಪೈಸರವಿಲ್ಲ, ಓಸರಿಸೆನನ್ಯಕ್ಕೆ
ಆಸೆಮಾಡೆನು ಮತ್ತೆ ಭಿನ್ನ ಸುಖಕ್ಕೆ
ಅರಳಿದು ಒಂದಾಗಿ ನಿಂದೆನಯ್ಯ!
ಬಸವಣ್ಣ ಮೊದಲ್ಲದ ಶರಣರಿಗೆ ಷರಣಾರ್ಥಿ
ಪ್ರಭುವಿನಿಂದ ಕೃತಕೃತ್ಯಳಾದೆನು ನಾನು
ಮರೆಯಲಾಗದು – ನಾನು ನಿಮ್ಮ ಶಿಶುವೆಂದು
ಚೆನ್ನಮಲ್ಲಿಕಾರ್ಜುನನ ಬೆರಸೆಂದು
ಎನ್ನ ಹರಸುತ್ತಿಹುದು.

೬೮. ಹೊಳೆವ ಕೆಂಜೆಡೆಗಳ ಮಣಿಮುಕುಟದ
ಒಪ್ಪುವ ಕಾಂತಿಯಿಂ ಈರೇಳುಭುವನಮಂ ಬೆಳಗುವ
ದಿವ್ಯಸ್ವರೂಪನಂ ಕಂಡೆ ನಾನು!
ಕಂಡೆನ್ನ ಕಂಗಳ ಬರ ಹಿಂಗಿತ್ತಿಂದು
ಗಂಡಗಂಡನೆಲ್ಲ ಹೆಂಡಹೆಂಡಿರಾಗಿ ಆಳುವ
ಗುರುವನ ಕಂಡೆ ನಾನು!

೬೯. ಕಿಚ್ಚಿಲ್ಲದ ಬೇಗೆಯಲ್ಲಿ ಬೆಂದೆನವ್ವ!

ಏರಿಲ್ಲದ ಘಾಯಡಲಿ ನೊಂದೆನವ್ವ

ಚೆನ್ನಮಲ್ಲಿಕಾರ್ಜುನ ದೇವಂಗೊಲಿದು

ಬಾರದ ಭವಂಗಳಲಿ ಬಂದೆನವ್ವ!

೭೦. ಬೆರಸುವಡೆ ಬೇಗ ತೋರ! ಹೊರಹಾರದಿರಯ್ಯ!

ನಿಮ್ಮಲ್ಲಿಗೆ ಸಲೆ ಸಂದ ತೊತ್ತಾನು, ಎನ್ನ ಹೊರಹಾಕದಿರಯ್ಯ!

ಚೆನ್ನಮಲ್ಲಿಕಾರ್ಜುನಯ್ಯ, ನಿಮ್ಮ ನಂಬಿ

ಬೆಂಬಳಿ ಬಂದೆನು ಇಂಬುಗೊಳ್ಳಯ್ಯ, ಬೇಗದಲಿ.

೭೧. ಬಲ್ಲಿದನ ಹಗೆಹ ತೆಗೆವನ್ನಬರ

ಬಡವನ ಹರಣ ಹೋದ ತೆರನಂತಾಯಿತ್ತು

ನೀ ಕಾಡಿ ಕಾಡಿ ನೋಡುವನ್ನ ಬರ!

ಎನಗಿದು ವಿಧಿಯೇ ಹೇಳಾ ತಂದೆ?!

ತೊರುವಾರುವನ್ನಬ ಒಮ್ಮೆ ಗಾಳಿಗೆ

ಹಾರಿ ಹೋದ ತೆರನಂತಾಯಿತ್ತು!

ಎನಗೆ ನೀನಾವ ಪರಿಯಲ್ಲಿ ಕರುಣಿಸುವೆಯಯ್ಯ,

ಚೆನ್ನಮಲ್ಲಿಕಾರ್ಜುನ?

೭೨. ಒಮ್ಮೆ ಕಾಮನ ಕಾಲ ಹಿಡಿವೆ,

ಒಮ್ಮೆ ಚಂದ್ರಮಗೆ ಸೆರಗೊಡ್ಡಿ ಬೇಡುವೆ!

ಸುಡು ವಿರಹವನು! ಆರಿಗೆ ಧೃತಿಗೆಡುವೆ?!

ಚೆನ್ನಮಲ್ಲಿಕಾರ್ಜುನದೇವನೆನ್ನನೊಲ್ಲದ ಕಾರಣ

ಎಲ್ಲರಿಗೆ ಹಂಗಿತಿ ಯಾದೆನವ್ವ!

೭೩. ಚಿಲಿಮಿಲಿ ಎಂದೋದುವ ಗಿಳಿಗಳೀರಾ!

ನೀವು ಕಾಣಿರೇ? ನೀವು ಕಾಣಿರೇ

ಸರವರದೊಳಗಾಡುವ ಹಂಸಗಳಿರಾ!

ನೀವು ಕಾಣಿರೇ? ನೀವು ಕಾಣಿರೇ

ಸರವೆತ್ತಿ ಪಾಡುವ ಕೋಗಿಲೆಗಳಿರಾ!

ನೀವು ಕಾಣಿರೇ? ನೀವು ಕಾಣಿರೇ

ಎರಗಿ ಬಂದಾಡುವ ತುಂಬಿಗಳಿರಾ!

ನೀವು ಕಾಣಿರೇ? ನೀವು ಕಾಣಿರೇ

ಗಿರಗಹ್ವರದೊಳಗಾಡುವ ನವಿಲುಗಳಿರಾ

ನೀವು ಕಾಣಿರೇ? ನೀವು ಕಾಣಿರೇ

ಚೆನ್ನಮಲ್ಲಿಕಾರ್ಜುನದೇವನೆಲ್ಲಿದ್ದಾನೆಂಬುದು ಬಲ್ಲಡೆ

ನೀವು, ಹೇಳಿರೇ!

೭೪. ಅಳಿಸಂಕುಳವೇ ಮಾಮರನೇ ಬೆಳದಿಂಗಳೇ, ಕೋಗಿಲಿಯೇ

ನಿಮ್ಮೆಲ್ಲರನು ಒಂದ ಬೇಡುವೆನು

ಎನ್ನೊಡೆಯ ಚೆನ್ನಮಲ್ಲಿಕಾರ್ಜುನದೇವರ ಕಂಡರೆ ಕರೆದು ತೋರಿರೆ!

೭೫. ವನವೆಲ್ಲ ನೀವೆ

ವನದೊಳಗಣ ದೇವತರುವೆಲ್ಲ ನೀವೆ

ತರುವಿನೊಳಗಾಡುವ ಖಗ ಮೃಗವೆಲ್ಲ ನೀವೆ

ಚೆನ್ನಮಲ್ಲಿಕಾರ್ಜುನ, ಸರ್ವಭರಿತನಾಗಿ

ಎನಗೇಕೆ ಮುಖದೋರೆ?

೭೬.ಪಚ್ಚೆಯ ನೆಲಗಟ್ಟು, ಕನಕದ ತೋರಣ, ವಜ್ರದ ಕಂಭ,

ಪವಳದ ಚಪ್ಪರವಿಕ್ಕಿ ಮದುವೆಯ ಮಾಡಿದರು.

ನಮ್ಮವರೆನ್ನ ಮದುವೆಯ ಮಾಡಿದರು.

ಕಂಡಣ ಕೈದಾರಗಟ್ಟಿ ಸ್ಥಿರಸೇಸೆಯನಿಟ್ಟು

ಚೆನ್ನಮಲ್ಲಿಕಾರ್ಜುನನೆಂಬ ಗಂಡಗೆನ್ನ ಮದುವೆಯ ಮಾಡಿದರು.

೭೭. ಗಗನದ ಗುಂಪ ಚಂದ್ರಮ ಬಲ್ಲುದಲ್ಲದೆ
ಮೇಲಿದ್ದಾಡುವ ಹದ್ದು ಬಲ್ಲುದೇ ಅಯ್ಯ?
ನದಿಯ ಗುಂಪ ತಾವರೆ ಬಲ್ಲುದಲ್ಲುದೆ
ತಡಿಯಲ್ಲಿದ್ದ ಹೊನ್ನವರಿಕೆ ಬಲ್ಲುದೇ ಅಯ್ಯ?
ಪುಷ್ಪದ ಮರಿಮಳವ ನೋರಜು ಬಲ್ಲುದೇ ಅಯ್ಯ?
ಚೆನ್ನಮಲ್ಲಿಕಾರ್ಜುನಯ್ಯ,
ನಿಮ್ಮ ಶರಣರ ನಿಲವ ನೀವೇ ಬಲ್ಲಿರಲ್ಲದೆ
ಈ ಕೋಣನ ಮೈಯ ಮೇಲಣ ಸೊಳ್ಳೆಗಳೆತ್ತ ಬಲ್ಲವಯ್ಯ?

೭೮.ಮಂಗಳವೇ ಬಜ್ಜನವೆನಗೆ!
ವಿಭೂತಿಯೇ ಒಳಗುಂದದರಿಸಿನವೆನಗೆ
ದಿಗಂಬರವೇ ದಿವ್ಯಾಂಬರವೆನಗೆ!
ಶಿವಪಾದರೇಣುವೇ ಅನುಲೇಪನವೆನಗೆ
ರುದ್ರಾಕ್ಷಿಯೇ ಮೈದೊಡುಗೆಯೆನಗೆ!
ಶರಣರ ಪಾದಂಗಳೇ ತೊಂಡಿಲ ಬಾಸಿಗವೆನಗೆ!
ಚೆನ್ನಮಲ್ಲಿಕಾರ್ಜುನಯ್ಯನೇ ಗಂಡನೆನಗೆ
ಆನು ಚೆನ್ನಮಲ್ಲಿಕಾರ್ಜುನಂಗೆ ಮದುವಳಿಗೆ
ಎನಗೆ ಬೇರೆ ಶೃಂಗಾರವೇಕೆ ಹೇಳಿರವ್ವ!?

೭೯.ಹಗಲ ನಲ್ಕು ಜಾವ ನಿಮ್ಮ ಕಳವಳದಲ್ಲಿಪ್ಪೆನು
ಎರುಳು ನಾಲ್ಕು ಜಾವ ಲಿಂಗದ ವಿಕಳಾವಸ್ಥೆಯಲ್ಲಿಪ್ಪೆನು!!
ಹಗಲಿರುಳು ನಿಮ್ಮ ಹಂಬಲದಲ್ಲಿ ಮೈಮರೆದೊರಗಿದೆನು!!!
ಚೆನ್ನಮಲ್ಲಿಕಾರ್ಜುನಯ್ಯ, ನಿಮ್ಮ ಒಲುಮೆ ನಟ್ಟು
ಹಸಿವು–ತೃಷೆ–ನಿದ್ರೆಯ ಮರೆದೆನು!

೮೦. ಆಲಿಸೆನ್ನ ಬಿನ್ನಪವ!

ಲಾಲಿಸೆನ್ನ ಬಿನ್ನಪವ

ಪಾಲಿಸೆನ್ನ ಬಿನ್ನಪವ

ಏಕೆನ್ನ ಮೊರೆಯ ಕೇಳೇ?

ನೊಡೆಯೆನ್ನ ದು:ಖವ ಚೆನ್ನಮಲ್ಲಿಕಾರ್ಜುನಯ್ಯ?

೮೧.ಅಯ್ಯ ದೊರದಲ್ಲಿರ್ದಹೆಯೆಂದು

ಬಾಯಾರಿ ಬಳಲುತ್ತಿದ್ದೆನಯ್ಯ ನಾನು!

ಅಯ್ಯ ಸಾರೆ ಬಂದು ನೀನೆನ್ನ ಕರಸ್ಥಲದಲ್ಲಿ ಮೂರ್ತಿಗೊಂಡರೆ

ಇನ್ನ ರತಿಯೆಲ್ಲ ನಿನ್ನಲ್ಲಿ ಲಿಂಗಯ್ಯ

ಆಲಿ ನಿಮ್ಮಲ್ಲಿ ನಟ್ಟವು ನೋಡಯ್ಯ!

ಚೆನ್ನಮಲ್ಲಿಕಾರ್ಜುನಯ್ಯ, ನಿಮ್ಮನೆನ್ನ ಕರಸ್ಥಲದಲ್ಲಿ ನೋಡಿ ನೋಡಿ

ಕಂಗಳೇ ಪ್ರಾಣವಾಗಿದ್ದೆನಯ್ಯ!

೮೨.ನಾನು ನಿನಗೊಲಿದೆ, ನೀನು ನನಗೊಲಿದೆ!

ನೀನೆನ್ನನಗಲದಿಪ್ಪಿ, ನಾ ನಿನ್ನನಗಲದಿಪ್ಪೆನಯ್ಯ

ನಿನಗೆ ನನಗೆ ಬೇರೊಂದು ಠಾವುಂಟೇ?

ನೀನು ಕರುಣಿಯೆಂಬುದ ನಾನು ಬಲ್ಲೆನು!

ನೀನಿರಿಸಿದ ಗತಿಯೊಳಗೆ ಇಪ್ಪವಳಾನಯ್ಯ,

ನೀನೆಬಲ್ಲೆ ಚೆನ್ನಮಲ್ಲಿಕಾರ್ಜುನ!

೮೩.ಅಯ್ಯ, ನೀ ಕೇಳಿದರೆ ಕೇಳು, ಕೇಳದಿದ್ದರೆ ಮಾಣು;
ನಾ ನಿನ್ನ ಹಾಡಿದಲ್ಲದೆ ಸೈರಿಸಲಾರೆನಯ್ಯ!
ಅಯ್ಯ, ನೀನೊಲಿದರೆ ಒಲಿ, ಒಲಿಯದಿದ್ದರೆ ಮಾಣು;
ನಾ ನಿನ್ನ ಪೂಜಿಸಿದಲ್ಲದೆ ಸೈರಿಸಲಾರೆನಯ್ಯ!
ಅಯ್ಯ, ನೀ ಮೆಚ್ಚಿದರೆ ಮೆಚ್ಚು, ಮೆಚ್ಚದಿದ್ದರೆ ಮಾಣು;
ನಾ ನಿನ್ನನಪ್ಪಿದಲ್ಲದೆ ಸೈರೆಸಲಾರೆನಯ್ಯ
ಅಯ್ಯ, ನೀ ನೋಡಿದರೆ ನೋಡು, ನೋಡದಿದ್ದರೆ ಮಾಣು;
ನಾ ನಿನ್ನ ನೋಡಿ ಹಿಗ್ಗಿ ಹಾರೈಸಿದಲ್ಲದೆ ಸೈರಿಸಲಾರೆನಯ್ಯ
ಚೆನ್ನಮಲ್ಲಿಕಾರ್ಜುನಯ್ಯ, ನಾ ನಿಮ್ಮ ಪೂಜಿಸಿ
ಹರುಷದಲೋಲಾಡುವೆನಯ್ಯ!!

೮೪.ಕಾಣುತ್ತ, ಕಾಣುತ್ತ
ಕಂಗಳ ಮುಚ್ಚಿದೆ ನೋಡವವ್ವ
ಕೇಳುತ್ತ, ಕೇಳುತ್ತ
ಮೈಮರೆದೊರಗಿದೆ ನೋಡವ್ವ!
ಹಾಸಿದ ಹಾಸಿಗೆಯ ಹಂಗಿಲ್ಲದೆ ಹೋಯಿತ್ತು ಕೇಳವ್ವ!
ಚೆನ್ನಮಲ್ಲಿಕಾರ್ಜುನ ದೇವರ ದೇವನು
ಕೊಡವ ಕೊರವ ನಾನೇನೆಂದರಿಯದೆ
ಮರೆದೆ ಕಾಣವ್ವ!

೮೫.ಬಾರದ ಭವಂಗಳಲ್ಲಿ ಬಂದೆನಯ್ಯ!
ಕಡೆಯಿಲ್ಲದ ತಾಪಂಗಳಲ್ಲಿ ನೊಂದು
ನಿಮ್ಮ ಕರುಣೆಗೆ ಬಳಿಸಂದೆನಯ್ಯ!
ಇದು ಕಾರಣ ಎನ್ನ ದೇವ ಚೆನ್ನಮಲ್ಲಿಕಾರ್ಜುನಂಗೆ
ತನುವನುವಾಗಿ ಮನ ಮಾರುವೋಗಿ
ಮತ್ತಿಲ್ಲದ ತವಕದ ಸ್ನೇಹಕ್ಕೆ
ತೆರಹಿನ್ನಂತು ಹೇಳಾ ತಂದೆ!?

೮೬.ಹೊಳೆವ ಕೆಂಜೆಡೆಗಳ ಮೇಲೆ ಎಳವೆಳುದಿಂಗಳು!

ಫಣಿಮಣಿ ಕರ್ಣಕುಂಡಲದವ ನೋಡವ್ವ!

ರುಂಡಮಾಲೆಯ ಕೊರಳವನ ಕಂಡರೆಒಮ್ಮೆ ಬರಹೇಳವ್ವ!

ಗೊವಿಂದನ ನಯನ ಉಂಗುಟದ ಮೇಲಿಪ್ಪುಶಿದು!

ಚೆನ್ನಮಲ್ಲಿಕಾರ್ಜುನ ದೇವಂಗಿದು ಕುರುಹವ್ವ!

೮೭.ಅಕ್ಕ ಕೇಳವ ಅಕ್ಕಯ್ಯ, ನಾನೊಂದು ಕನಸ ಕಂಡೆ!

ಅಕ್ಕಿಯಡಕೆ ಓಲೆ ತೆಂಗಿನ ಕಾಯ ಕಂಡೆ!

ಚಿಕ್ಕ ಚಿಕ್ಕ ಜಡೆಗಳ ಸುಲಿಪಲ್ಲ ಗೊರವನು

ಬಿಕ್ಷಕ್ಕೆ ಮನೆಗೆ ಬಂದುದ ಕಂಡೆನವ್ವ!

ಮಿಕ್ಕು ಮೀರಿ ಹೋಹನ ಬೆಂಬತ್ತಿ ಕೈವಿಡಿದೆನು!

ಚೆನ್ನಮಲ್ಲಿಕಾರ್ಜುನಯ್ಯನ ಕಂದು ಕಣ್ದೆರೆದನು!

೮೮.ಎನ್ನ ಮನವ ಮಾರುಗೊಂಡವನ್ನ!

ಎನ್ನ ತನುವ ಸೊರೆಗೊಂಡನವ್ವ

ಎನ್ನ ಸುಖವನೊಪ್ಪುಗೊಂಡನವ್ವ!

ಎನ್ನಿರವ ನಿಂಬುಗೊಂಡನವ್ವ!

ಚೆನ್ನಮಲ್ಲಿಕಾರ್ಜುನನೊಲುಮೆಯವಳಾನು!

೮೯.ಹಗಲಿನ ಕೂಟಕ್ಕೆ ಹೋರಿ ಬೆಂಡಾದೆ!

ಇರುಳಿನ ಕೂಟಕ್ಕೆ ಇಂಬರಿದು ಹತ್ತಿದೆ!

ಕನಸಿನಲ್ಲಿ ಮನ ಸಂಗವಾಗಿ

ಮನಸಿನಲ್ಲಿ ಮೈಮರೆದು ಸಂಗವಾಗಿರ್ದೆ!

ಚೆನ್ನಮಲ್ಲಿಕಾರ್ಜುನನನೊಪ್ಪಚ್ಚಿ ಕೂಡಿ ಕಣ್ತೆರೆದೆನವ್ವ!

೯೦. ಅಕ್ಕ ಕೇಳಕ್ಕ,

ಆನೊಂದು ಕನಸ ಕಂಡೆ!

ಚಿಕ್ಕ ಚಿಕ್ಕ ಜಡೆಯ ಸುಲಿಪಲ್ಲ ಗುರುವನು

ಬಂದೆನ್ನ ನೆರೆದ ನೋಡವ್ವ!

ಆತನನಪ್ಪಿಕೊಂಡು ತಳವೆಳಗಾದೆನೆಲಗೇ!

ಚೆನ್ನಮಲ್ಲಿಕಾರ್ಜುನನ ಕೊಡಿ

ಕಣ್ತೆರೆದು ತಳವೆಳಗಾದೆನೆಲಗೇ!!

೯೧.ಇಹಕ್ಕೊಬ್ಬ ಗಂಡನೆ? ಪರಕೊಬ್ಬ ಗಂಡನೆ?

ಲೌಕಿಕಗೊಬ್ಬ ಗಂಡನೆ? ಪಾರಮಾರ್ಥಕೊಬ್ಬ ಗಂಡನೆ?

ನನ್ನ ಗಂಡ ಚೆನ್ನಮಲ್ಲಿಕಾರ್ಜುನ ದೇವರಲ್ಲದೆ

ಮಿಕ್ಕಿದ ಗಂಡರೆಲ್ಲ ಮುಗಿಲ ಮರೆಯ ಬಣ್ಣದ ಬೊಂಬೆಯಂತೆ!

೯೨.ರತ್ನದ ಸಂಕೋಲೆಯಾದರೆ ತೊಡರಲ್ಲವೆ?

ಮುತ್ತಿನ ಬಲೆಯಾದರೆ ಬಂಧನವಲ್ಲವೆ?

ಚಿನ್ನದ ಕತ್ತಿಯಲ್ಲಿ ತಲೆಯ ಹೊಯ್ದರೆ ಸಾಯದಿಪ್ಪರೆ?

ಲೋಕದ ಭಜನೆಯ ಭಕ್ತಿಯಲ್ಲಿ ಸಿಲುಕಿದರೆ

ಜನನಮರಣ ಬಿಡುವುದೇ ಚೆನ್ನಮಲ್ಲಿಕಾರ್ಜುನ?

೯೩.ಎರದ ಮುಳ್ಳಿನಂತೆ ಪರಗಂಡನಗವ್ವಾ!

ಸೋಂಕಲಮ್ಮೆ, ಸುಳಿಯಲಮ್ಮೆ! ನಂಬಿ ನಚ್ಚಿ ಮಾತಾಡಲಮ್ಮೆನವ್ವ

ಚೆನ್ನಮಲ್ಲಿಕಾರ್ಜುನನಲ್ಲದುಳಿದ ಗಂಡರ ಉರದಲ್ಲಿ ಮುಳ್ಳುಂಟೆಂದು

ನಾನಪ್ಪಲಮ್ಮೆನವ್ವ!

೯೪.ಗುರುವಿನಿಂದ ಲಿಂಗವ ಕಂಡೆ, ಜಂಗಮವ ಕಂಡೆ!

ಗುರುವಿನಿಂದ ಪಾದೋದಕವ ಕಂಡೆ, ಪ್ರಸಾದವ ಕಂಡೆ!

ಗುರುವಿನಿಂದ ನನ್ನ ನಾ ಕಂಡೆ, ಚೆನ್ನಮಲ್ಲಿಕಾರ್ಜುನ

೯೫.ತೆರಳಿಯ ಹುಳು ತನ್ನ ಸ್ನೇಹಕ್ಕೆ ಮನೆಯ ಮಾಡಿ

ತನ್ನ ನೂಲು ತನ್ನನೇ ಸುತ್ತಿ ಸಾವಂತೆ–

ಎನಗೂ ಮನೆಯೇ? ಎನಗೂ ಧನವೇ?

ಎನ್ನ ಮನೆಮಠ ಕನಸ ಕಂಡು ಕಣ್ದೆರೆದಂತಾಯಿತ್ತು!

ಎನ್ನ ಮನದ ಸಂಸಾರವ ಮಾಣಿಸಾ ಚೆನ್ನಮಲ್ಲಿಕಾರ್ಜುನ

೯೬.ತನ್ನವನುವಾಯಿತ್ತು, ಮನವನುವಾಯಿತ್ತು,

ಪ್ರಾಣವನುವಾಯಿತ್ತು, ಮುನಿದು ಬಾರದ ಪರಿಯಿನ್ನೆಂತು ಹೇಳಾ!

ಎನ್ನ ಪ್ರಾಣದಲ್ಲಿ ಸಂದು, ಎನ್ನ ಮನಕ್ಕೆ ಮನವಾಗಿ

ನಿಂದ ಎನ್ನ ದೇವ ಚೆನ್ನಮಲ್ಲಿಕಾರ್ಜುನನ

ಕಾಣದೊಡೆ ಆನೆಂತು ಬದುಕು ವೆನವ್ವ!

೯೭.ಹಿಡಿವೆನೊಂದೊಡೆ ಹಿಡಿಗೆ ಬರನವ್ವ,

ತಡೆವೆನೆಂದೊಡೆ ಮೀರಿ ಹೋದನವ್ವ,

ಒಪ್ಪಚ್ಚಿ ಅಗಲಿದೊಡೆ ಕಳವಳಗೊಂಡೆ,

ಚೆನ್ನಮಲ್ಲಿಕಾರ್ಜುನನ ಕಾಣದೆ

ಆನಾರೆಂದರಿಯೆ ಕೇಳಾ ತಾಯೆ

೯೮.ಮನ ಬೇಸರವಾದೊಡೆ ಪ್ರಾಣ ಪಲ್ಲಟವಹುದವ್ವ,

ತನುಕರಣಂಗಳು ಮೀಸಲಾಗಿ

ಮನ ಸಮರಸವಾಯಿತ್ತು ನೋಡಾ!

ಅನ್ಯವನರಿಯೆ, ಭಿನವನರಿಯೆ!

ಎನ್ನ ದೇವಚೆನ್ನಮಲ್ಲಿಕಾರ್ಜುನಯ್ಯನ

ಬಳಿಯವಳಾನು ಕೇಳಾ ತಾಯೇ

೯೯. ಕಾಮಿಸಿ ಕಲ್ಪಿಸಿ ಕುಂದಿಡೆನವ್ವ

ಮೋಹಿಸಿ ಮುದ್ದಿಸಿ ಮರುಳಾದೆನವ್ವ,

ತೆರೆಯದೆ ತೊರೆಯದೆ ನಲಿದು ನಂಬಿದೆ ನಾನು,

ಎನ್ನ ದೇವ ಚೆನ್ನಮಲ್ಲಿಕಾರ್ಜುನನೆನ್ನ ನೊಲ್ಲದೊಡೆ ಆನೇವೇನವ್ವ

೧೦೦. ಕಳಿವರಿದ ಮನವು ತಲೆಕೆಳಗಾದುದವ್ವ!

ಸುಳಿದು ಬೀಸುವ ಗಾಳಿ ಉರಿಯಾಯಿತವ್ವ!

ಬೆಳುದಿಂಗಳು ಬಿಸಿಲಾಯಿತ್ತು ಕೆಳದಿ!

ಹೊಳಲ ಸುಂಡಿನಂತೆ ತೊಳಲುತ್ತಿದ್ದೆನವ್ವ!

ತಿಲುಹೌ ಬುದ್ದಿಯ, ಹೇಳಿ ಕರೆತಾರೆಲೆಗವ್ವ–

ಚೆನ್ನ ಮಲ್ಲಿಕಾರ್ಜುನಂಗೆ ಎರಡರ ಮುನಿಸವ್ವ!

೧೦೧. ಕಂಗಳೊಳಗೆ ತೊಳಗಿ ಬೆಳಗುವ

ದಿವ್ಯರೂಪನ ಕಂಡು ಮೈಮರೆದೆನವ್ವ,

ಮಣಿಮುಕುತದ, ಫಣಿ–ಕಂಕಣದ,

ನಗೆಮೊಗದ ಸುಲಿಪಲ್ಲ ಸೊಬನ ಕಂಡು ಮನಸೋತೆನವ್ವ,

ಇಂತಾಗಿ ಚೆನ್ನಮಲ್ಲಿಕಾರ್ಜುನನೆನ್ನ ಮದುವಣಿಗ,

ಆನುಮದುವಣಿಗಿ ಕೇಳಾ ತಾಯೆ

೧೦೨.  ಮನಮನ ತಾರ್ಕಣೆಯ ಕಂಡು ಅನುಭವಿಸಲು

ನೆನೆಹೇ ಘನವಹುದಲ್ಲದೆ

ಅದು ಹವಣದಲ್ಲಿ ನಿಲ್ಲುವುದೇ?

ಎಲೆ ಅವ್ವ, ನೀನು ಮರುಳುವ್ವೆ!

ಎನ್ನ ದೇವ ಚೆನ್ನಮಲ್ಲಿಕಾರ್ಜುನಯ್ಯಗೊಲಿದು

ಸಲೆ ಮಾಗುವ್ವೋದೆನು!

ನಿನ್ನ ತಾಯಿತನವನೊಲ್ಲೆ ಹೋಗೇ!

೧೦೩.ಲಿಂಗವಣು ಪುರಾತನರನೂ

ಅನ್ಯರ ಮನೆಯೊಳಯಿಂಡೆ ಹೋಗಿ ಹೊಗಳುವರು

ತಮ್ಮದೊಂದು ಉದರ ಕಾರಣ

ಲಿಂಗವೂ ಪುರಾತನರೂ ಅಲ್ಲಿಗೆ ಬರಬಲ್ಲರೆ?

ಅನ್ಯವನೆ ಮರೆದು, ನಿಮ್ಮ ನೆನೆವರ ಎನಗೊಮ್ಮೆ ತೋರಾ

ಚೆನ್ನಮಲ್ಲಿಕಾರ್ಜುನ!

೧೦೪.ಗುಣ–ದೋಷ ಸಂಪಾದನೆಯ ಮಾಡುವನ್ನಕ್ಕ

ಕಾಮದ ಒಡಲು, ಕ್ರೋಧದ ಗೊತ್ತು;

ಲೋಭವ ಇಕ್ಕೆ, ಮೊಹದ ಮಂದಿರ;

ಮದದಾವರಣ, ಮತ್ಸರದ ಹೊದಿಕೆ!

ಆ ಭಾವವರತಲ್ಲದೆ

ಚೆನ್ನಮಲ್ಲಿಕಾರ್ಜುನನ ಅರಿವುದಕ್ಕೆ ಇಂಬಿಲ್ಲಿ ಕಾಣಿರನ್ನ!

೧೦೫.  ಕಡೆಗೆ ಮಾಡದ ಭಕ್ತಿ, ದೃಢವಿಲ್ಲದಾಳುತನ!

ಮೃಡನೊಲಿದು ಹೇಳಿದರೆ ಎಂತೊಲಿವನಯ್ಯ?!

ಮಾಡಲಾಗದಳಿವನವ ಮಾಡಿದರೆ ಮನದೊಡೆಯ ಬಲ್ಲನ್ಯೆಸೆ!

ವಿರಳವಿಲ್ಲದ ಮಣಿಯ ಪವಣಿಸಿಹೆನೆಂದಡೆ

ದುರುಳ ಚೆನ್ನಮಲ್ಲಿಕಾರ್ಜುನಯ್ಯ ನೊಂತೊಲಿವನಯ್ಯ?

೧೦೬.ಬೆಟ್ಟದ ಮೇಲೊಂದು ಮನೆಯ ಮಾಡಿ

ಮೃಗಂಗಳಿಗಂಜಿದಡೆಂತಯ್ಯ?

ಸಮುದ್ರದ ತಡಿಯಲೊಂದು ಮನೆಯ ಮಾಡಿ

ನೊರೆತೆರೆಗಳಿಗಂಜಿದಡೆಂತಯ್ಯ?

ಸಂತೆಯೊಳಗೊಂದು ಮನೆಯ ಮಾಡಿ

ಶಬ್ದಕ್ಕೆ ನಾಚಿದಡೆಂತಯ್ಯ?

ಚೆನ್ನಮಲ್ಲಿಕಾರ್ಜುನದೇವ ಕೇಳಯ್ಯ

ಲೋಕದೊಳಗೆ ಹುಟ್ಟಿದ ಬಳಿಕ

ಸ್ತುತಿ-ನಿಂದೆಗಳು ಬಂದರೆ

ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು!

೧೦೭. ವೇದಶಾಸ್ತ್ರಾಗಮ ಪುರಾಣಂಗಳೆಂಬುವ

ಕೊಟ್ಟಣವ ಕುಟ್ಟುತ್ತ ನುಚ್ಚು ತೌಡು ಕಾಣಿ ಭೋ!

ಅವ ಕುಟ್ಟಲೇಕೆ?

ಅತ್ತಲಿತ್ತ ಹರಿವ ಮನದ ಸಿರವನರಿಯ ಬಲ್ಲಡೆ

ಬಚ್ಚ ಬರಿಯ ಬಯಲು ಚೆನ್ನಮಲ್ಲಿಕಾರ್ಜುನ

೧೦೮. ಅಮೇಧ್ಯಡಹ ಮಡಕೆ, ಮೂತ್ರದ ಕುಡಿಕೆ;

ಎಲುವಿನ ತಡಿಕೆ, ಕೀವಿನ ಹಡಿಕೆ

ಸುಡಲೀ ದೇಹವ!

ಒಡಲುಮಿಡಿದು ಕೆಡದಿರು

ಚೆನ್ನಮಲ್ಲಿಕಾರ್ಜುನನರಿ ಮರುಳೇ!

೧೯೯.ಜಾಲಗಾರನೊಬ್ಬ ಜಲವ ಹೊಕ್ಕು ಶೋಧಿಸಿ

ಹಲವು ಪ್ರಾಣಿಗಳ ಕೊಂದು ನಲಿದಾಡುವ!

ತನ್ನ ಮನೆಯಲೊಂದು ಶಿಶು ಸತ್ತರೆ

ಅದಕೆ ಮರುಗುವಂತೆ ಅವಕೇಕೆ ಮರುಗನು?

"ಸ್ವಾತ್ಮಾನವಿತ ರಾಂಶ್ಚೈವ

ದೃಷ್ಟಾದೃಷ್ಟ್ವಾನ ಭಿದ್ಯತೇ!

ಸರ್ವಂ ಚಿಜ್ಜ್ಯೋತಿರೇವತಿ

ಯಃ ಪಶ್ಯತಿ ಸ ಪಶ್ಯತಿ॥"

ಎಂದುದಾಗಿ-ಜಾಲಗಾರನ ದುಃಖ ಜಗಕೆಲ್ಲ ನಗೆಗೆಡೆ!

ಇದು ಕಾರಣ ಚೆನ್ನಮಲ್ಲಿಕಾರ್ಜುನಯ್ಯನ ಭಕ್ತನಾಗಿರ್ದು

ಜೀವ-ಹಿಂಸೆಯ ಮಾಡುವ ಮಾದಿಗರನೇನೆಂಬೆನಯ್ಯ!

೧೧೦. ಶೀಲ! ಶೀಲ! ಎಂತೆಂಬಿರಯ್ಯ?

ಶೀಲದ ನೆಲಯ ಒಲ್ಲಡೆ ಹೇಳಿರೋ!

ಕಾಮ ಒಂದನೇ ಭವಿ, ಕ್ರೋಧ ಎರಡನೇ ಭವಿ!

ಲೋಭ ಮೂರನೇ ಭವಿ, ಮೋಹ ನಾಲ್ಕನೇ ಭವಿ!

ಮದ ಐದನೇ ಭವಿ, ಮತ್ಸರ ಆರನೇ ಭವಿ

ಆಮಿಷ ಏಳನೇ ಭವಿ!!

ಇಂತೀ ಏಳು ಭವಿಗಳ ತಮ್ಮೊಳಗಿಟ್ಟುಕೊಂಡು

ಲಿಂಗವಿಲ್ಲದವರ ಭವಿ ಭವಿ ಎಂಬರು!

ತಮ್ಮಂತರಂಗದಲ್ಲಿದ್ದ ಲಿಂಗಾಂಗದ ಸುದ್ದಿಯನ್ನರಿಯದೆ

ಅಚ್ಚಪ್ರಸಾದಿ-ನಿಚ್ಚಪ್ರಸಾದಿ-ಸಮಯಪ್ರಸಾದಿಗಳೆಂದು

ಜಲಕ್ಕೆ ಕನ್ನವನ್ನಿಕ್ಕಿ ಉದಕವ ತಂದು

ಲಿಂಗಮಜ್ಜನಕ್ಕೆರೆವ ಹಗಲುಗಳ್ಳರಿಗೆ ಮೆಚ್ಚುವನೆ

ಚೆನ್ನಮಲ್ಲಿಕಾರ್ಜುನ?

೧೧೧. ಭವಿಸಂಗವಳಿದು ಶಿವಭಕ್ತನಾದ ಬಳಿಕ

ಭಕ್ತಂಗೆ ಭವಿಸಂಗವತಿಘೋರ ನರಕ!

ಶರಣಸತಿ–ಲಿಂಗಪತಿಯಾದ ಬಳಿಕ

ಶರಣಂಗೆ ಸತಿಸಂಗವತಿ ಘೋರ ನರಕ!

ಚೆನ್ನಮಲ್ಲಿಕಾರ್ಜುನ,

ಲಿಂಗೈಕ್ಯಂಗೆ ಪ್ರಾಣಗುಣವಳಿಯದವರ ಸಂಗವೇ ಭಂಗ!

೧೧೨. ಹೂವು ಕಂದಿಡಲ್ಲಿ ಪರಿಮಳವನರಸುವಟೇ?

ಎನ್ನ ತಂದೆ ಕಂದನಲ್ಲಿ ಕುಂಡನರಸುವರೇ

ಎಲೆ ದೇವ ಸ್ನೇಹವಿದ್ದ ಠಾವಿನೊಳು

ದ್ರೋಹವಾದ ವಳಿಕ ಸದ್ಗುಣನನರಸುವರೇನಯ್ಯ?

ನೀ ಎನ್ನ ತಂದೆ, ಹೂವು ಕಂದಿದಲ್ಲಿ ಪರಿಮಳವನರಸುವರೇ?

ಕಂದನಲ್ಲಿ ಕಂದನರಸುವರೇ

ಎಲೆ ದೇವ, ಬೆಂದ ಹುಣ್ಣಿಗೆ ಬೇಗೆಯನಿಕ್ಕುವರೇ?

ಗುರುವೇ, ಹೂವು ಕಂದಿದಲ್ಲಿ ಪರಿಮಳವನರಸುವರೇ

ಕಂದನಲ್ಲಿ ಕಂದನರಸುವರೇ?

ಕೇಳಯ್ಯ ಶ್ರೀ ಶೈಲ ಚೆನ್ನಮಲ್ಲಿಕಾರ್ಜುನ.

ಹೊಳೆಯಿಳಿದ ಬಳಿಕ ಅಂಬಿಗಂಗೇನುಂಟು?

ಹೂವು ಕಂದಿದಲ್ಲಿ ಪರಿಮಳವನರಸುವರೇ

ಕಂದನಲ್ಲಿ ಕುಂದನರಸುವರೇ?

೧೧೩. ಕಂಗಳಲ್ಲಿ ಕಾಂಬೆನೆಂದು ಕತ್ತಲೆಯ ಕೊಕ್ಕೊಡೆಂತಹುದಯ್ಯ?

ಬೆಟ್ಟದ ತುದಿಯ ಮೆಟ್ಟಿಲೆಂದು ಹಳ್ಳಕೊಳ್ಳಂಗಳಲ್ಲಿ

ಇಳಿದೊಡೆಂತಹುದಯ್ಯ?

ನೀನಿಕ್ಕಿದ ಸಯಿದಾನವನೊಲ್ಲದೆ

ಬೇರೆ ಬಯಸಿದೊಡೆಂತಹುದಯ್ಯ?

ಚೆನ್ನಮಲ್ಲಿಕಾರ್ಜುನನ ಘನವನರಿಯಲೆಂದು

ಕಿರುಕುಳಕ್ಕೆ ಸಂದೊಡೆತಹುದಯ್ಯ?

೧೧೪. ಒಳಗಣ ಗಂಡನವ್ವಾ, ಹೊರಗಣ ಮಿಂಡುನವ್ವಾ!

ಎರಡನೂ ನಡೆಸಲು ಬಾರದವ್ವ

ಚೆನ್ನಮಲ್ಲಿಕಾರ್ಜುನಯ್ಯ,

ಬಿಲ್ಲು ಬೆಳವಲಕಾಯನೊಂದಾಗಿ ಹಿಡಿಯಲು ಬಾರದಯ್ಯ!!

೧೧೫. ಚಿನ್ನಕ್ಕರಿಸಿನ, ಚಿನ್ನಕ್ಕರಿಸಿನ!

ಚಿನ್ನಕ್ಕರಿಸಿನವ ಕೊಳ್ಳಿರವ್ವ!

ನಮ್ಮನಲ್ಲನ ಮೈಯ್ಯ ಹತ್ತುವ ಅರಿಸಿನವ ಕೊಳ್ಳಿರವ್ವ!!

ಒಳಗುಂದದರಿಸಿನವ ಮಿಂದು

ಚೆನ್ನಮಲ್ಲಿಕಾರ್ಜುನನಪ್ಪಿರವ್ವ!